ತಾವೆಲ್ಲ ಕುಳಿತುಕೊಳ್ಳಿ, ಮಾನ್ಯ ಮಂತ್ರಿಯವರು ಸಂಬಂಧಪಟ್ಟವರ ಮೇಲೆ ಕ್ರಮ ತೆಗೆದುಕೊಳ್ಳುತ್ತೇವೆಂದು ಹೇಳಿದ್ದಾರೆ.

(ಉ) ತುಂಗಾಭದ್ರಾ ಎಡದಂಡೆ ಕಾಲುವೆಯ ರಿಪೇರಿ.

+ ಶ್ರೀ ಎಂ.ಮಲ್ಲಿಕಾರ್ಜುನ ಖರ್ಗೆ (ಗುರುಮಿಟ್ಕಾಲ್):- ಮಾನ್ಯ ಉಪಾಧ್ಯಕ್ಷರೆ, ಈಗಾಗಲೇ ತುಂಗಭದ್ರಾ ಎಡದಂಡೆ ಕಾಲುವೆ ಬಗ್ಗೆ ನಾನು ನೋಟೀಸ್ ಕೊಟ್ಟಿದ್ದೆ. ಆದರೆ ಕಾರಣಾಂತರದಿಂದ ಈ ಎರಡು ಮೂರು ದಿವಸಗಳಿಂದ ಅದನ್ನು ಚರ್ಚೆಗೆ ತೆಗೆದುಕೊಂಡಿಲ್ಲ. ಈಗ ಅದನ್ನು ಶೂನ್ಯ ವೇಳೆಯಲ್ಲಿ ಪ್ರಸ್ತಾಪ ಮಾಡಿ ಎಂದು ಹೇಳಿದ ಮೇಲೆ ನಾನು ಪ್ರಸ್ತಾಪ ಮಾಡುತ್ತಿದ್ದೇನೆ. ತುಂಗಭದ್ರಾ ನಾಲೆ ಇಡೀ ರಾಯಚೂರ್ ಜಿಲ್ಲೆಯ ರೈತರಿಗೆ ಅವರ ಜೀವನಕ್ಕೆ ನೇರವಾಗಿ ಸಂಬಂಧಪಡುವಂಥಾದ್ದು, ಸುಮಾರು 0ಕಿ.ಮೀ ನಿಂದ 192ಕಿ.ಮೀ. ಉದ್ದವಿರುವಂತಹ ಈ ನಾಲೆಯನ್ನು ರಿಪೇರಿಗೆ ತೆಗೆದುಕೊಳ್ಳಬೇಕೆಂದು ಸರ್ಕಾರ ತೀರ್ಮಾನವನ್ನು ತೆಗೆದುಕೊಂಡಿತ್ತು. ಹಿಂದೆ ಶ್ರೀ ಕೆ.ಸಿ.ರೆಡ್ಡಿಯವರು ಪಿ.ಡಬ್ಲ್ಯೂ.ಡಿಯ ಸೆಕ್ರೆಟರಿಯಾಗಿದ್ದರು. ಪವರ್ ಕಾರ್ಪೊರೇಷನ್‌ನ ಎಂ.ಡಿ.ಯು ಆಗಿದ್ದರು. 1977-78ರಲ್ಲಿ ಅವರ ಅಧ್ಯಕ್ಷತೆಯಲ್ಲಿ ಈ ಕಾಲುವೆಯನ್ನು ಸ್ಟೆಂಗ್ತನ್ ಮಾಡುವ ಬಗ್ಗೆ ಒಂದು ರಿಪೋರ್ಟ್ ತಯಾರು ಮಾಡಿ ಎಂದು ಹೇಳಿ ಒಂದು ಎಕ್ಸ್‌ಪರ್ಟ್ ಕಮಿಟಿಯನ್ನು ಮಾಡಿದರು. ಅವರು ಪೂರ್ತಿ ನಾಲೆಯನ್ನು ತನಿಖೆ ಮಾಡಿ ಈ ಕಮಿಟಿಯವರು 1983ರಲ್ಲಿ ಒಂದು ವರದಿಯನ್ನು ಕೊಟ್ಟರು. ಆ ವರದಿಯ ಆಧಾರದ ಮೇಲೆ ಹಂತ ಹಂತವಾಗಿ ಬ್ರೀಚ್ ಆಗುವಂತಹ ಕಾಲುವೆಯನ್ನು ಸ್ಟೆಂಗ್ತನ್ ಮಾಡಬೇಕೆಂದು ರೂಪರೇಶೆಗಳನ್ನು ಹಾಕಬೇಕೆಂದು ಒಂದು ವರದಿಯನ್ನು ಮಾಡಿ ಕೊಟ್ಟಿತ್ತು. ಅದರ ಪ್ರಕಾರ ಸರ್ಕಾರವು ಹಣವನ್ನು ಬಿಡುಗಡೆ ಮಾಡಬೇಕೆಂದು ಆಯಿತು. ಆದರೆ ಕಾರಣಾಂತರದಿಂದ ಹಣ ಬಿಡುಗಡೆಯಾಗಲಿಲ್ಲ. ಕೊನೆಗೆ 1993-94ರಲ್ಲಿ ಮತ್ತು 1994-95ರಲ್ಲಿ ಶ್ರೀಮಾನ್ ವೀರಪ್ಪಮೊಯಿಲಿಯವರು ಇದ್ದಾಗ ಹಣವನ್ನು ಬಿಡುಗಡೆ ಮಾಡಿದರು. ಆಗ ಈ ರಿಪೇರಿ ಕೆಲಸ ಪ್ರಾರಂಭವಾಯಿತು. ಪುನಃ ಈ ವರ್ಷ ಈ ಕಾಲುವೆಯನ್ನು ಸ್ಟೆಂಗ್ತನ್ ಮಾಡಬೇಕೆಂದು ಏಪ್ರಿಲ್ ತಿಂಗಳ ಕೊನೆಯಲ್ಲಿ ಇದನ್ನು ಪೂರ್ಣಮಾಡಬೇಕು ಅಥವಾ ಮೇ ತಿಂಗಳಲ್ಲಿ ಕೆಲಸ ಪ್ರಾರಂಭ ಮಾಡಿ ಜೂನ್ ಅಂತ್ಯದಲ್ಲಿ ಇಲ್ಲದಿದ್ದರೆ ಜುಲೈ ಮೊದಲ ವಾರದಲ್ಲಿ ಈ ಕೆಲಸವನ್ನು ಪೂರ್ತಿ ಮಾಡಿ ರೈತರು ನೀರನ್ನು ಉಪಯೋಗಿಸುವಂತಹ ವ್ಯವಸ್ಥೆಯನ್ನು ಮಾಡಬೇಕೆಂದು ಆಯಿತು. ಈ ತುಂಗಭದ್ರಾ ಎಡದಂಡೆ ನಾಲೆಯಿಂದ ಸುಮಾರು 3ಲಕ್ಷ 75ಸಾವಿರ ಎಕರೆಗೆ ಅನುಕೂಲವಾಗುವುದು. ಸರ್ಕಾರ ಈ ಕಾಲುವೆಯ ರಿಪೇರಿ ಕೆಲಸವನ್ನು ತೆಗೆದುಕೊಳ್ಳಬೇಕೆಂದು ನಿರ್ಧಾರ ಮಾಡಿದ ಮೇಲೆ ಪ್ರಾರಂಭ ಮಾಡಬೇಕಾಗಿತ್ತು. ಇವರು ನಿರ್ಣಯವನ್ನು ತೆಗೆದುಕೊಳ್ಳಲು ಒಂದು ತಿಂಗಳ ತೆಗೆದುಕೊಂಡರು.

2.10 ಪಿ.ಎಂ.

ಏಕೆಂದರೆ ಅಲ್ಲಿನ ರಾಜಕೀಯ ನಾಯಕರು ಏನಿದ್ದಾರೆ, ಕಂಟ್ರಾಕ್ಟರ್ಸ್ ಈ ಇಬ್ಬರೂ

ಸೇರಿ ಸರ್ಕಾರದ ಮೇಲೆ ಒತ್ತಡ ತಂದು ಎಲ್ಲಾ ವರ್ಕ್ಸ್ ಅನ್ನು ಪಾಸ್ ಮಾಡಿಕೊಂಡು, ಟೆಂಡರ್ ಕಾಲ್ ಮಾಡುವುದು, ಇದರಲ್ಲೇ ಸುಮಾರು ಒಂದು ತಿಂಗಳು ಕಳೆದುಹೋಯಿತು. ಮೊನ್ನೆ ಈ ಕೆಲಸ ಪ್ರಾರಂಭವಾಯಿತು. ಆದರೆ, ಶ್ರೀಮಾನ್ ನಾಗೇಗೌಡರು ಆ ಭಾಗದಲ್ಲಿ ಪ್ರವಾಸ ಹೋದಾಗ, ಅವರ ಗಮನಕ್ಕೆ ಇದು ಬಂದಾಗ, ಅವರು ಜುಲೈ ಅಂತ್ಯಕ್ಕೆ ನಾವು ಈ ಕೆಲಸವನ್ನು ಪೂರ್ತಿ ಮುಗಿಸಿ ನೀರನ್ನು ಬಿಡುವ ವ್ಯವಸ್ಥೆಯನ್ನು ಮಾಡುತ್ತೇವೆಂದು ಹೇಳಿದರು. ಆದರೆ ಇವತ್ತು ಆಗಸ್ಟ್ ಅಂತ್ಯದವರೆವಿಗೂ ಈ ಕೆಲಸ ಮುಗಿಯತಕ್ಕಂಥ ಸ್ಥಿತಿಯಲ್ಲಿಲ್ಲ. ಏಕೆಂದರೆ, ಇದಕ್ಕೆ ಇಪ್ಪತ್ತು ಕೋಟಿ ರೂಪಾಯಿಗಳ ಅಂದಾಜು ಮಾಡಿದ್ದಾರೆ, ಇಲ್ಲಿಯವರೆಗೆ ಇವರು ಬಿಡುಗಡೆ ಮಾಡಿದ್ದು ಕೇವಲ ನಾಲ್ಕು ಕೋಟಿ ರೂಪಾಯಿಗಳು ಮಾತ್ರ. ಇವರನ್ನು ನಂಬಿಕೊಂಡು, ಇವರ ಹಿಂದಿನ ಹೇಳಿಕೆಯನ್ನು ನಂಬಿಕೊಂಡು, ಸರ್ಕಾರ ಜುಲೈ ಮೊದಲನೆ ವಾರದಲ್ಲಿ ನೀರನ್ನು ಬಿಡುಗಡೆ ಮಾಡುತ್ತಾರೆಂದು ತಿಳಿದುಕೊಂಡು ಎರಡು ಲಕ್ಷ ಎಕರೆಯಲ್ಲಿ ಪ್ಯಾಡಿ ಆರವತ್ತು ಸಾವಿರ ಎಕರೆ ಜಮೀನಿನಲ್ಲಿ ಹತ್ತಿ ಬೀಜವನ್ನು ಆಮೇಲೆ ಸುಮಾರು ತೊಂಬತ್ತು ಸಾವಿರ ಎಕರೆಯಲ್ಲಿ ಶೇಂಗಾ ಮತ್ತು ಸೂರ್ಯಕಾಂತಿ ಬೆಳೆಯನ್ನು ಹಾಕಲು ಜನ ಎಲ್ಲೆ ತಯಾರಿ ಮಾಡಿಕೊಂಡು, ನರ್ಸರಿ ಎಲ್ಲಾ ತಯಾರಿ ಮಾಡಿಕೊಂಡು ಇಟ್ಟುಕೊಂಡು ಅವರು ನೀರು ಬರುತ್ತದೆ ಬರುತ್ತದೆ ಎಂದು ಕುಳಿತರು, ಅವರು ಹಾಗೆಯೇ ಕುಳಿತರು. ಈಗ ಅದು ಹೋಯಿತು. ಇವತ್ತು ಜುಲೈ ತಿಂಗಳು ಕೂಡ ಪೂರ್ತಿ ಹೋಗುತ್ತದೆ. ಆಗಸ್ಟ್ ತಿಂಗಳಿನಲ್ಲೂ ಕೂಡ ಇದು ಮುಗಿಯತಕ್ಕಂಥ ಏನು ವ್ಯವಸ್ಥೆ ಕೂಡ ಇಲ್ಲ. ಅಂದರೆ, ಸರ್ಕಾರ ಏನು ನಿದ್ದೆಮಾಡುತ್ತಿತ್ತೇನು ಎಂದು ನಾನು ಕೇಳುತ್ತಿದ್ದೇನೆ. ಏತಕ್ಕೆ ಅಧಿಕಾರಿಗಳು ಈ ಸ್ಟೆಪ್ಸ್ ಅನ್ನು ತೆಗೆದುಕೊಂಡಿಲ್ಲ? ಲಕ್ಷಾಂತರ ರೈತರ ಜೀವನಕ್ಕೆ ನೇರವಾಗಿ, ಅವರ ಆರ್ಥಿಕ ಪರಿಸ್ಥಿತಿಗೆ ಅನುಕೂಲವಾಗತಕ್ಕಂಥ ಕಾರ್ಯಕ್ರಮವನ್ನು ಕೂಡ ನೀವು ಎಚ್ಚರದಿಂದ ತೆಗೆದುಕೊಳ್ಳದೇ ಹೋದರೆ ಮತ್ತೆ ರೈತರು ಅಲ್ಲಿ ಬದುಕುವುದು ಹೇಗೆ? ಇಂತಹ ತಾರೀಖಿನೊಳಗೆ ನಾವು ಇದನ್ನು ಪೂರ್ತಿ ಮಾಡಿ ನೀರನ್ನು ಬಿಡುಗಡೆ ಮಾಡುತ್ತೇವೆಂದು ನೀವು ಏತಕ್ಕೆ ಆ ಘೋಷಣೆಯನ್ನು ಕೊಡುತ್ತೀರಿ? ಅಧ್ಯಕ್ಷರೆ ಸುಳ್ಳು ಆಶ್ವಾಸನೆಯನ್ನು ಕೊಟ್ಟು, ಇವತ್ತು ಏನಾಗಿದೆ ಎಂದರೆ, ಸುಮಾರು ಇನ್ನೂರ ಐವತ್ತು ಕೋಟಿ ರೂಪಾಯಿಗಳ ಬೆಳೆಗಳು ಹೋಯಿತು. ಆಮೇಲೆ, ಅವರು ಬೀಜವನ್ನು ಏನು ಹಾಕಿದ್ದರು, ಸುಮಾರು ಎರಡು ಕೋಟಿ ರೂಪಾಯಿಗಳ ಕಾಟನ್ ಸೀಡ್ಸ್, ಒಂಭತ್ತು ಕೋಟಿ ರೂಪಾಯಿಗಳ ಶೇಂಗಾ ಮತ್ತು ಸೂರ್ಯಕಾಂತಿ ಬೀಜ ಅದೇ ರೀತಿಯಾಗಿ ಪ್ಯಾಡಿಗೂ ಸಮೀಪ ಸಮೀಪ ಸುಮಾರು ಎಂಟು, ಹತ್ತು ಕೋಟಿ ರೂಪಾಯಿ, ಅದೂ ನಷ್ಟ. ಅಂದರೆ ನೀವು ಬರಿ ಬೀಜದ ಲೆಕ್ಕ ಹಾಕಿದರೂ ಕೂಡ ಇವತ್ತು ರೈತನದು ಹತ್ತಾರು ಕೋಟಿ ರೂಪಾಯಿಗಳು ಹೋಯಿತು. ಕೋಟ್ಯಾಂತರ ರೂಪಾಯಿಯ ಬೆಳೆ ನಷ್ಟವಾಯಿತು. ಇನ್ನೂರ ಐವತ್ತು, ಇನ್ನೂರ ಅರವತ್ತು ಕೋಟಿ ರೂಪಾಯಿಗಳ ನಷ್ಟವಾಗಿದೆ ಎಂದು ಅವರ ಕೃಷಿ ತಜ್ಞರೇ ಹೇಳಿದ್ದಾರೆ, ನಾವು ಹೇಳಬೇಕಾದಂಥದ್ದು ಇಲ್ಲ, ಅಥವಾ ಅತಿಶಯೋಕ್ತಿ ಮಾಡತಕ್ಕಂಥದ್ದು ಕೂಡ

ಇಲ್ಲ. ಇದು ಒಂದು ಕಡೆ, ಎರಡನೆಯದು, ನೀವು ಈ ಕೆಲಸವನ್ನು ವಿಳಂಬ ಮಾಡಿದ್ದಕ್ಕೆ ಆ ಜವಾಬ್ದಾರಿಯನ್ನು ನೀವು ಹೊತ್ತುಕೊಳ್ಳಬೇಕು. ಎರಡನೆಯದು, ಅಪ್ರೂವಲ್ ಕೊಡುವುದಕ್ಕೆ ಏತಕ್ಕೆ ವಿಳಂಬವಾಯಿತು? ಯಾವ ಕಂಟ್ರಾಕ್ಟರ್‌ಗೋಸ್ಕರ ಅವರು ಯಾವ ರಾಜಕಾರಣಿಯ ಮೇಲೆ ಒತ್ತಡವನ್ನು ತಂದರು? ಯಾವ ಮುಖಂಡರು ನಿಮ್ಮ ಮೇಲೆ ಒತ್ತಡ ತಂದು ಇಂತಿಂಥ ಕಂಟ್ರಾಕ್ಟರ್‌ಗಳಿಗೆ ಕೊಡಿ ಎಂದು ಹೇಳಿದರು ಎನ್ನತಕ್ಕಂಥದ್ದನ್ನು ಕೂಡ ಹೇಳಬೇಕು. ನಾನು ಇಲ್ಲಿಯವರೆಗೆ ಹೇಳಿದಹಾಗೆ, ಕೆಲವು ಜನ, ನಾವು ಈ ಕೆಲಸಗಳನ್ನು ನಿಮಗೇ ಕೊಡುತ್ತೇವೆಂದು ಒಂದೊಂದು ಕೆಲಸಕ್ಕೆ ಶೇಕಡ ಹತ್ತರಷ್ಟು ನಮಗೆ ಕೊಡಬೇಕು. ಆ ಶೇಕಡ ಹತ್ತನ್ನು ಕೊಟ್ಟರೆ ಆ ಕೆಲಸ ಇಂತಹವರಿಗೆ ಕೊಡಬೇಕು 'ಎ'ಗೆ ಕೊಡಬೇಕು 'ಬಿ'ಗೆ ಕೊಡಬೇಕು, 'ಸಿ'ಗೆ ಕೊಡಬೇಕು, ಎಂದು ಮಾಡಿಕೊಂಡಿದ್ದಾರಂತೆ ಏಕೆಂದರೆ ಸಾವಿರಾರು ಚೈನ್ ಉದ್ದವಿರತಕ್ಕಂಥ ಕೆಲಸದಲ್ಲಿ ಒಬ್ಬೊಬ್ಬರಿಗೆ ನೂರು ಚೈನ್ ಕೊಟ್ಟಿದ್ದಾರೆ, ನೂರ ಐವತ್ತು ಚೈನ್ ಕೊಟ್ಟಿದ್ದಾರೆ, ನಲವತ್ತು ಚೈನ್ ಕೊಟ್ಟಿದ್ದಾರೆ. ಹೀಗೆ ಇವತ್ತು ಇದರಲ್ಲಿ ಕೋಟ್ಯಾಂತರ ರೂಪಾಯಿಗಳ ಅವ್ಯವಹಾರ ಆಗಿರತಕ್ಕಂಥದ್ದು ಕಂಡು ಬಂದಿದೆ. ಅದನ್ನು ಯಾರು ಮಾಡಿದ್ದಾರೆ, ಎಂದು ಇದರ ಬಗ್ಗೆ ನೀವು ತನಿಖೆ ಮಾಡಿಸಬೇಕು. ಏಕೆಂದರೆ, ನೀವು ಬರುವುದಕ್ಕಿಂತ ಮುಂಚಿನಿಂದಲೂ ಇದು ಪ್ರಾರಂಭವಾಗಿದೆ. ಈ ವ್ಯವಸ್ಥೆ, ನೀವು ಬಂದ ಮೇಲೆ ಕಂಟ್ರಾಕ್ಟನ್ನು ಕೊಟ್ಟಿದ್ದಿರೋ ಅಥವಾ ಬರುವುದಕ್ಕಿಂತ ಮುಂಚೆ ಕೊಟ್ಟಿದ್ದಾರೋ ಎನ್ನುವ ಮಾಹಿತಿ ನನ್ನ ಹತ್ತಿರವಿಲ್ಲ. ಆದರೆ, ನಾನು ಅಲ್ಲಿ ಆ ಸ್ಪಾಟ್‌ಗೆ ಭೇಟಿ ನೀಡಿದ್ದೇನೆ. ನಾನು ಎಂಟೈರ್ ಒಂದು ನೂರ ತೊಂಬತ್ತೆರಡು ಕಿ.ಮಿ.ನಲ್ಲಿ, ಸುಮಾರು ಅರವತ್ತು, ಎಪ್ಪತ್ತು ಕಿ.ಮಿ. ಅಡ್ಡಾಡಿ ನೋಡಿದ್ದೇನೆ. ಕೆಲಸ ಹೇಗೆ ನೆಡೆದಿದೆ ಎಂದರೆ, ಕೆಲಸ ಕೆಲಸವೇ. ಹೇಗೆಂದರೆ ಅಧ್ಯಕ್ಷರೆ, ಕೆಲಸವನ್ನು ಯಾರು ತೆಗೆದುಕೊಂಡಿದ್ದಾರೆಂದರೆ, ಒಬ್ಬರು ರಿಟೈರ್ಡ್ ಅಸಿಸ್ಟೆಂಟ್ ಇಂಜಿನಿಯರ್. ಇದನ್ನು ಟೆಂಡರ್ ಕರೆದು ಅವರಿಗೆ ವಹಿಸಿ ಕೊಟ್ಟಿದ್ದಾರೆ. ಯಾರು ಬೇಕು ಅವರು ತೆಗೆದುಕೊಳ್ಳಬೇಕೆಂದು ಇಲ್ಲ. ಆದರೆ ಅಲ್ಲಿ ಶಿಫಾರಸ್ಸಿನ ಮೇಲೆ, ಅಲ್ಲಿಯ ಸ್ಥಳೀಯ ಪುಡಾರಿಗಳ ಶಿಫಾರಸ್ಸು ಇರಬಹುದು. ಪುಡಾರಿಗಳಿಗೆ ಸ್ವಾಭಾವಿಕವಾಗಿ ಇಂಜಿನಿಯರ್ಸ್ ಹೆದರುತ್ತಾರೆ. ಏಕೆಂದರೆ ಅವರಿಗೆ ಟ್ರಾನ್ಸ್‌ಫರ್ ಪೋಸ್ಟಿಂಗ್ ಇದೆ. ಅವರಿಗೆ ಬೇಕಾದವರೇ ಅಲ್ಲಿ ಇರುತ್ತಾರೆ, ಇಲ್ಲಪ್ಪ, ನಾಳೆ ನಾವು ಅವರ ಮಾತನ್ನು ಕೇಳಲಿಲ್ಲವೆಂದರೆ, ನಮಗೆ ವರ್ಗಾವಣೆ ಮಾಡುತ್ತಾರೆಂದು, ಅವರು ಇವರು ಏನು ಹೇಳುತ್ತಾರೆ ಅದನ್ನು ತಕ್ಷಣ ಕೇಳುವಂಥದ್ದು ನೆಡೆದಿದೆ. ಅದಕ್ಕಾಗಿ ಏನಾಗಿದೆ ಎಂದರೆ, ಒಬ್ಬ ರಿಟೈರ್ಡ್ ಅಸಿಸ್ಟೆಂಟ್ ಇಂಜಿನಿಯರ್ ಸುಮಾರು ನೂರು, ನೂರ ಐವತ್ತು ಚೈನ್ ಕಂಟ್ರಾಕ್ಟ್ ತೆಗೆದುಕೊಂಡಿದ್ದಾರೆ. ಒಬ್ಬರು ರಿಟೈರ್ಡ್ ಟೀಚರ್, ಕ್ಷಮಿಸಿ, ರಿಟೈರ್ಡ್ ಟೀಚರ್ ಅಲ್ಲ. ಏಕೆಂದರೆ ಅವರು ಟೀಚರ್ ಕೆಲಸವನ್ನೂ ಮಾನ್ವಿಯಲ್ಲಿ ಮಾಡುತ್ತಾರೆ, ಈ ಕಡೆ ಮುನಿರಾಬಾದ್‌ಗೆ ಬಂದು ಕಂಟ್ರಾಕ್ಟ್ ಕೆಲಸವನ್ನೂ ಮಾಡುತ್ತಾರೆ. ಅವರು ನಾಲ್ಕು ಜನರನ್ನು ಇಟ್ಟುಕೊಂಡು, ಆ ಜೂನಿಯರ್ ಇಂಜಿನಿಯರ್ ಮುಖಾಂತರ, ಅವರಿಗೆ ಬೇಕಾದ ಅಸಿಸ್ಟೆಂಟ್ ಇಂಜಿನಿಯರ್ ಮುಖಾಂತರ ಅಲ್ಲಿ ಇಲ್ಲಿ ಕೆಲಸ ಮಾಡಿಸುತ್ತಾನೆ,

ಅವನಿಗೆ ನಲವತ್ತು ಚೈನುಗಳ ಕಲಸ. ಅಂದರೆ, ಈ ರೀತಿಯಾಗಿ ಯಾರಿಗೆ ಚಾನಲ್ ವರ್ಕ್ಸ್‌ನಲ್ಲಿ, ಇರಿಗೇಷನ್ ವರ್ಕ್ಸ್‌ನಲ್ಲಿ ಅನುಭವವಿಲ್ಲ ಅಥವಾ ಕೆನಾಲ್ ಬಂದ್ ಅನ್ನು ಸ್ಟೆಂಗ್ತನ್ ಮಾಡತಕ್ಕಂಥ ಟೆಕ್ನಿಕಲ್ ಆಗಿ ಏನೂ ಗೊತ್ತಿಲ್ಲ, ಅಂತಹವರಿಗೆ ಕೆಲಸವನ್ನು ಕೊಟ್ಟು, ನೀವು ಅವರ ಕೈಯಿಂದ ಈ ಕೆಲಸವನ್ನು ಮಾಡಿಸುತ್ತಿದ್ದೀರಿ. ಹೀಗಾದರೆ ಎಷ್ಟರ ಮಟ್ಟಿಗೆ ನಿಗದಿತ ಸಮಯದಲ್ಲಿ ಈ ಕೆಲಸವಾಗುತ್ತದೆ ಎನ್ನುವುದನ್ನು ನೀವು ಹೇಳಬೇಕು. ಇದು ಪತ್ರಿಕೆಯಲ್ಲೂ ಕೂಡ ಬಂದಿದೆ. ಏಕೆಂದರೆ, ಅಲ್ಲಿನ ಜನ ಬಹಳ ಸೌಮ್ಯರು, ಮೈಲ್ಡ್, ಪಾಪ ಅವರು ಎಜಿಟೇಷನ್ ಮಾಡುವುದಿಲ್ಲ. ಬಹಳ ಹೆಚ್ಚೆಂದರೆ ಒಂದು ಅರ್ಜಿಯನ್ನು ಕೊಡುವುದು, ಮಂತ್ರಿಗಳಿಗೆ ಬಂದು ಹೇಳುವುದು. ಈ ಕಡೆ ಏನಿದೆ ಎಂದು ತಮಗೆ ಗೊತ್ತಿದೆ. ಯಾವುದೇ ಒಂದು ಸಣ್ಣಪುಟ್ಟ ಸಮಸ್ಯೆ ಇದ್ದರೂ ಕೂಡ ಜನ ಚಳುವಳಿಯನ್ನು ಮಾಡುತ್ತಾರೆ, ನೀವು ಎಲ್ಲೇ ಊರುಗಳಿಗೆ ಹೊರಟರೆ ಅಥವಾ ಪ್ರವಾಸಕ್ಕೆ ಹೊರಟರೆ ಜನ ನಿಮ್ಮನ್ನು ಅಡ್ಡ ಹಾಕಿ ನಿಲ್ಲುತ್ತಾರೆ, ಸತ್ಯಾಗ್ರಹ ಮಾಡುತ್ತಾರೆ, ಆವಾಗ ನೀವು ಬೇಗ ಈ ಕಡೆ ಕಣ್ಣನ್ನು ತೆರೆದು ದುಡ್ಡನ್ನು ಬಿಡುಗಡೆ ಮಾಡುತ್ತೀರಿ, ಎಲ್‌ಒಸಿಯನ್ನು ಕೊಡುತ್ತೀರಿ, ನಿಮಗೆ ಬೇಕಾದವರಿಗೆ ಸಹಾಯವನ್ನೂ ಮಾಡುತ್ತೀರಿ. ಇಲ್ಲಿ ಇಪ್ಪತ್ತು ಕೋಟಿಯಲ್ಲಿ ನಾಲ್ಕು ಕೋಟಿ ಮಾತ್ರ ಬಿಡುಗಡೆಯಾಗಿದೆ. ಮತ್ತೆ, ಈ ಒಂದು ಕೆಲಸವನ್ನು ಜುಲೈ ಅಂತ್ಯದೊಳಗಾಗಿ ಮುಗಿಸುತ್ತೇವೆಂದು ಹೇಳುತ್ತೀರಿ. ಯಾವ ಕೆಲಸವನ್ನು ಜುಲೈ ಮೊದಲನೇ ವಾರದಲ್ಲಿ ಮುಗಿಸಬೇಕಾಗಿತ್ತೋ, ಆ ಕೆಲಸವನ್ನು ಈ ಜುಲೈ ಅಂತ್ಯದಲ್ಲಿ ಮುಗಿಸುತ್ತೇವೆಂದು ಹೇಳಿದರು ಕೂಡ, ಇವತ್ತು ಹದಿನೇಳನೇ ತಾರೀಖು ಇದ್ದರೂ ಕೂಡ, ನೀವು ಬಿಡುಗಡೆ ಮಾಡಿದರ ಹಣ ನಾಲ್ಕು ಕೋಟಿ ರೂಪಾಯಿಗಳು. ಅನೇಕ ಜನ ಕಂಟ್ರಾಕ್ಟರ್ಸ್ ಕೆಲಸ ಮಾಡಿದ್ದಾರೆ, ಆ ಪೇಮೆಂಟು ಹಾಗೇ ಉಳಿದಿದೆ. ಅಂದಾಗ, ನೀವು ಯಾವ ದೃಷ್ಟಿಯಲ್ಲಿ ಈ ಕೆಲಸ ಜುಲೈ ಅಂತ್ಯದೊಳಗೆ ಮುಗಿಯುತ್ತದೆಂದು ಹೇಳಿದಿರಿ?

ಉಪಾಧ್ಯಕ್ಷರು:- ಬೇಗ ಮುಗಿಸಿರಿ.

ಶ್ರೀ ಎಂ.ಮಲ್ಲಿಕಾರ್ಜುನ ಖರ್ಗೆ:- ಬೇಗನೆ ಮುಗಿಸಿ ಎಂದು ಹೇಳಿದರೆ, ಇದು ಒಬ್ಬರು ಇಬ್ಬರ ಪ್ರಶ್ನೆಯಲ್ಲ. ಇವತ್ತು ಅವರು ಸಸಿಗಳನ್ನು ನಾಟಿಗೆ ಇಟ್ಟುಕೊಂಡು, ನರ್ಸರಿ ತಯಾರಿ ಮಾಡಿಕೊಂಡು ಇಟ್ಟುಕೊಂಡಂಥ ಜನಕ್ಕೆ ಬೀಜವೂ ಹೋಯಿತು, ಯಾವ ಬೆಳೆಯನ್ನು ತೆಗೆಯುವಂಥ ಸಾಧ್ಯತೆ ಇಲ್ಲ. ನಾವು ಒಂದು ಟಿಸಿಹೆಚ್ ಕಾಲೇಜ್‌ಗೆ ಸಂಬಂಧಿಸಿದಂತೆ ಅರ್ಧ ಗಂಟೆಯನ್ನು ಕಳೆದಿದ್ದೇವೆ, ಇನ್ನು ಒಬ್ಬರಿಗೆ ಮನೆ ಸಿಕ್ಕಿಲ್ಲವೆಂದು ನಾಲ್ಕು ಗಂಟೆಯನ್ನು ಕಳೆದಿದ್ದೇವೆ. ಇಲ್ಲಿ ಸುಮಾರು ಎರಡು, ಮೂರು ಲಕ್ಷ ರೈತರು, ಆರು ಲಕ್ಷ ಎಕರೆಯಲ್ಲಿ ಇವತ್ತು ನೀರನ್ನು ಕೊಡತಕ್ಕಂಥ ವ್ಯವಸ್ಥೆ ಇರುವುದರ ಬಗ್ಗೆ ಮಾತನಾಡುವುದಕ್ಕೆ ಸಮಯವಿಲ್ಲ, ಉತ್ತರ ಕೊಡುವುದಕ್ಕೂ ಸಮಯವಿಲ್ಲವೆಂದರೆ ಮತ್ತೆ ನಾವು ಏನು ಮಾಡಬೇಕು?

ಉಪಾಧ್ಯಕ್ಷರು:- ತಾವು ಮುಗಿಸಿ.

ಶ್ರೀ ಎಂ.ಮಲ್ಲಿಕಾರ್ಜುನ ಖರ್ಗೆ:- ನಾವು ಯಾವಾಗ ಪ್ರಸ್ತಾಪ ಮಾಡಬೇಕು? ಕೊಡುವ ಡಿಸ್ಕ್ರಿಷನ್ ನಿಮಗಿದೆ, ಆ ಡಿಸ್ಕ್ರಿಷನ್ ಅನ್ನು ತಾವು ಸರಿಯಾಗಿ ಉಪಯೋಗ ಮಾಡಿದ್ದರೆ ಇದನ್ನು ನಾವು ಮೊದಲೇ ಹೇಳಬಹುದಾಗಿತ್ತು. ಅಧ್ಯಕ್ಷರೆ, ಅದಕ್ಕೆ ನಾನು ಹೇಳತಕ್ಕಂಥದ್ದು ಇಷ್ಟೆ, ಒಂದು ಈ ಎಡದಂಡೆ ನಾಲೆಯನ್ನು ದುರಸ್ತಿ ಮಾಡತಕ್ಕಂಥ ವ್ಯವಸ್ಥೆಯನ್ನು ಸರ್ಕಾರ ಸರಿಯಾಗಿ ಮಾಡಿಲ್ಲ, ಆಸಕ್ತಿಯನ್ನು ವಹಿಸಲಿಲ್ಲ. ಸಮಯದ ಪ್ರಕಾರ ಟೆಂಡರ್ ಅನ್ನು ಕರೆಯಬೇಕು, ಟೆಂಡರ್ ಆಗಲಿ, ಕೆಲಸವನ್ನಾಗಲಿ ಅಪ್ರೂವ್ ಮಾಡಿ ಕೊಟ್ಟಿಲ್ಲ, ಇಲ್ಲಿ ವಿಳಂಬ ಮಾಡಿದ್ದಕ್ಕಾಗಿ ಅಲ್ಲಿ ವಿಳಂಬವಾಯಿತು. ಅದಕ್ಕೆ ಇವತ್ತು ಅವರಿಗೆ ಕೋಟ್ಯಾಂತರ ರೂಪಾಯಿಗಳ ನಷ್ಟವಾಗಿದೆ, ಆ ನಷ್ಟವನ್ನು ಯಾರು ತುಂಬಿ ಕೊಡುತ್ತಾರೆ? ಅದಕ್ಕೆ ಕಾರಣಕರ್ತರು ಯಾರು? ಎನ್ನತಕ್ಕಂಥದ್ದೆಲ್ಲಾ ಕೂಡ ಬಯಲಿಗೆ ಬರಬೇಕು. ಮತ್ತೆ ಅಲ್ಲಿ ಏನು ಕಳಪೆ ಕೆಲಸ ನೆಡೆದಿದೆ, ಆ ಕೆಲಸ ನೀವು ಬೇಕಾದರೆ ಸ್ವತಃ ಇನ್‌ಸ್ಪೆಕ್ಟ್ ಮಾಡಿ. ಸ್ವಾಮಿ, ಮಣ್ಣನ್ನು ಹಾಕಿದ ಮೇಲೆ ಮುರುಮು ತಂದು ಏನು ಹಾಕುತ್ತಾರಲ್ಲ, ನೀರನ್ನು ಹಾಕದೇ ಅದರ ಮೇಲೆ ರೋಲರ್ ಮಾಡುತ್ತಾರೆ. ನಾವು ಕೇಳಿದಾಗ ಅವರು ಏನು ಹೇಳಿದರು ಎಂದರೆ, ಎಲ್ಲಿ ಅವರಿಗೆ ಕೊಟ್ಟಂಥ ಕ್ವಾರಿ ಏನಿದೆ, ಆ ಅಪ್ರೂವ್ ಕ್ವಾರಿಯಿಂದ ಅಲ್ಲೇ ನೀರನ್ನು ಹಾಕಿ ಮಿಶ್ರಣ ಮಾಡಿಕೊಂಡು ಸ್ವಲ್ಪ ಹದ ಮಾಡಿಕೊಂಡು ಬರುತ್ತಾರೆಂದು ಅವರು ಹೇಳುತ್ತಿದ್ದರು. ನೀರನ್ನು ಅಲ್ಲೇ ಸಿಂಪಡಿಸುತ್ತಾರಂತೆ, ಸಿಂಪಡಿಸಿ ಆ ಲಾರಿಯಲ್ಲಿ ಹಾಕಿಕೊಂಡು ತಂದು ಇಲ್ಲಿ ಹಾಕುತ್ತಾರೆನ್ನುವುದನ್ನು ಹೇಳುತ್ತಿದ್ದರು. ನಾವು ಕೇಳಿದ್ದೇವೆ, ಸಾಮಾನ್ಯವಾಗಿ ಎಲ್ಲಾ ಕಡೆ ಮಾಡತಕ್ಕಂಥದ್ದು ಅಲ್ಲೆ ಟ್ಯಾಂಕರ್ ಅನ್ನು ಹೊಯ್ದು, ಟ್ಯಾಂಕರ್ ಮುಖಾಂತರ ರೋಲರ್ ಅನ್ನು ತಿರುಗಿಸಬೇಕೆನ್ನತಕ್ಕಂಥದ್ದು ಇದೆ. ಪ್ರತಿಯೊಂದು ಫೀಟ್ ಮಣ್ಣನ್ನು ಹಾಕಿದ ಮೇಲೆ, ಮುರುಮು ಹಾಕಿದ ಮೇಲೆ, ಅದರ ಮೇಲೆ ನೀವು ರೋಲರ್ ಅನ್ನು ತಿರುಗಿಸಿಬೇಕು. ಅವರು, ಮೂರು ಮೂರು ಫೀಟ್ ಎತ್ತರ, ಒಂದಲ್ಲ ಮೂರು ಮೂರು ಫೀಟ್ ಒಮ್ಮೆ ಹಾಕುವುದು, ಅದರ ಮೇಲೆ ಒಮ್ಮೆ ರೋಲರ್ ಅನ್ನು ತಿರುಗಿಸಿ ಮತ್ತೆ ಮೂರು ಫೀಟ್ ಹಾಕುವುದು.

ಏಕೆಂದರೆ ಬೇಗಬೇಗನೆ ಕೆಲಸಗಳನ್ನು ಮುಗಿಸಿಕೊಳ್ಳಬೇಕು, ಅವರಿಗೆ ಬಿಲ್ಲು ಬೇಕು. ಇದನ್ನು ನಾವು ಅವರ ಗಮನಕ್ಕೆ ತಂದಿದ್ದೇವೆ. ಅದನ್ನು ರೆಕ್ಟಿಫೈ ಮಾಡುತ್ತೇವೆ ಎಂದು ಹೇಳಿದರು, ಅದು ಏನಾಯಿತೋ ಗೊತ್ತಾಗಲಿಲ್ಲ. ಅಲ್ಲಿ ನಿಮ್ಮ ಒಬ್ಬ ಕ್ವಾಲಿಟಿ ಕಂಟ್ರೋಲ್ ಇಂಜಿನಿಯರ್ ಕೂಡ ಇದ್ದರು, ಅಸಿಸ್ಟೆಂಟ್ ಎಕ್ಸಿಕ್ಯುಟಿವ್ ಇಂಜಿನಿಯರ್. ಅವರನ್ನು ಕೇಳಿದರೆ ಏನು ಹೇಳುತ್ತಾರೆ ಎಂದರೆ ನಾನೊಬ್ಬನೇ 192 ಕಿಲೋಮೀಟರ್ ಅಡ್ಡಾಡುವುದಕ್ಕೆ ಆಗುವುದಿಲ್ಲ. ನಾನು ಇಲ್ಲಿ ಸರಿಯಾಗಿ ಮಾಡುತ್ತಾರೆ ಎಂದು ಇಲ್ಲಿ ನೋಡಿಕೊಂಡು ಹೋದರೆ ಇನ್ನೊಬ್ಬ ಬಂದು ಹಾಗೆ ಮಾಡುತ್ತಾನೆ, ಸ್ವಲ್ಪ ಕಷ್ಟವಾಗಿದೆ ಎನ್ನತಕ್ಕಂಥ ಮಾತನ್ನು ಅವರು ಹೇಳಿದರು, ಅಂದರೆ ಅವರು ಇದ್ದಂಥಾದ್ದನ್ನು ಪ್ರಾಕ್ಟಿಕಲ್ ಆಗಿ ಹೇಳಿದರು. ನನಗೆ ಎಲ್ಲಾ ಕಡೆ ಓಡಾಡುವುದಕ್ಕೆ ಆಗುವುದಿಲ್ಲ, ನನ್ನ ಹತ್ತಿರ ಜೀಪ್ ಇಲ್ಲ, ಅದಕ್ಕಾಗಿ ಇದನ್ನು ನಾನು ಸಂಬಧಪಟ್ಟ ಅಸಿಸ್ಟೆಂಟ್ ಎಕ್ಸಿಕ್ಯುಟಿವ್ ಇಂಜಿನಿಯರ್‌ಗೆ

ಹೇಳಿದ್ದೇನೆ, ಅವರು ಇದನ್ನು ಮಾಡುವುದಿಲ್ಲ ಎನ್ನತಕ್ಕಂಥ ಮಾತನ್ನು ಇವತ್ತಿನ ದಿವಸ ನಿಮ್ಮ ಅಸಿಸ್ಟೆಂಟ್ ಎಕ್ಸಿಕ್ಯುಟಿವ್ ಇಂಜಿನಿಯರ್, ಕ್ವಾಲಿಟಿ ಕಂಟ್ರೋಲ್, ಮುನಿರಾಬಾದ್ ಅವರು ಸ್ಪಷ್ಟಪಡಿಸಿದರು. ಇಂಥ ಕೆಲಸಗಳು ಒಂದು ಕಡೆ ನಡೆದಿದೆ. ಇದಕ್ಕೆ ಸರ್ಕಾರ ಗಮನ ಹರಿಸಿಲ್ಲ ಮತ್ತು ನೀವು ಎಲ್ಲಾ ಕಡೆ ಹೋಗಿ ಬಂದಿರಿ, ಯು.ಕೆ.ಪಿ.ಗೆ ಬಂದಿರಿ, ಮುಲ್ಲಾಮಾರಿ ನೋಡಿದಿರಿ, ಚುಳ್ಕಿನಾಲಾ ನೋಡಿದಿರಿ, ಬೆಣ್ಣೆತೊರೆ ನೋಡಿದಿರಿ, ಇವೆಲ್ಲಾ ಆಯಿತು. ಇದಕ್ಕೆ ಮಾತ್ರ ಏಕೆ ಹೋಗಲಿಲ್ಲ? ಇಲ್ಲಿ ಸುಮಾರು ನಾಲ್ಕೈದು ಲಕ್ಷ ರೈತರಿಗೆ ತೊಂದರೆಯಾಗಿದೆ. ಅವರು ಕೆನಾಲನ್ನು ಓಪನ್ ಮಾಡಿಕೊಂಡು ಕುಳಿತಿದ್ದಾರೆ, ಕೆಲಸ ನಡೆದಿದೆ, ಯಾವ ರೀತಿ ಕೆಲಸ ನಡೆದಿದೆ, ಎಂಥ ಕ್ವಾಲಿಟಿ ಇದೆ, ಕಾಂಟ್ರಾಕ್ಟರ್ ಯಾರು? ಅಧಿಕಾರಿಗಳೂ ಕೂಡ ಬೇರೆಯವರ ಹೆಸರಿನಲ್ಲಿ ಕೆಲಸ ಮಾಡುತ್ತಿದ್ದಾರೆ ಎನ್ನತಕ್ಕಂಥಾದ್ದನ್ನು ತಾವು ನೇರವಾಗಿ ನೋಡಿಕೊಂಡು ಹೊಸಪೇಟೆ ಮೂಲಕ ನೇರವಾಗಿ ಬೆಂಗಳೂರಿಗೆ ಬರಬಹುದಾಗಿತ್ತು. ಆದರೆ ಅಲ್ಲಿಗೆ ಹೋಗಲೇ ಇಲ್ಲ. ಇವತ್ತು ತಾವು ಅಲ್ಲಿಗೆ ಹೋಗದೇ ಇದ್ದ ಕಾರಣದಿಂದ ಡಿಲೇ ಆಗಿದೆ ಎನ್ನತಕ್ಕಂಥ ಮಾತನ್ನು ನಾನು ಹೇಳುತ್ತೇನೆ. ಈ ಜವಾಬ್ದಾರಿಯನ್ನು ತಾವು ಹೊತ್ತುಕೊಳ್ಳಬೇಕಾಗುತ್ತದೆ. ಇದು ಒಂದು ಕಡೆ. ಇನ್ನೊಂದು ಕಡೆ ಏನಾಗಿದೆ ಎಂದರೆ, ಇದೇ ಕೆನಾಲ್‌ನಿಂದ ಕುಡಿಯುವ ನೀರಿನ ವ್ಯವಸ್ಥೆಯೂ ಇದೆ. ರಾಯಚೂರು ಪಟ್ಟಣಕ್ಕೂ ಈ ಕೆನಾಲ್ ನೀರೇ ಹೋಗುತ್ತದೆ, ಸಿಂಧನೂರು ಪಟ್ಟಣಕ್ಕೂ ಇದರಿಂದಲೇ ನೀರು ಹೋಗುತ್ತದೆ, ಮಾನ್ವಿ ಪಟ್ಟಣಕ್ಕೂ ಇದರಿಂದಲೇ ನೀರು ಹೋಗುತ್ತದೆ. 3 ಪಟ್ಟಣಗಳಿಗೆ ಲಕ್ಷಾಂತರ ಜನರಿಗೆ ಕುಡಿಯುವ ನೀರಿನ ವ್ಯವಸ್ಥೆಯೂ ಕೂಡ ಈ ಕೆನಾಲ್ ಮುಖಾಂತರವೇ. ಆದರೆ ಈಗ ಎರಡು ತಿಂಗಳು ಆಯಿತು. ಏನು ವ್ಯವಸ್ಥೆಯಾಗಿದೆ. ಜನರ ಗತಿ ಏನಾಗಿರಬಹುದು, ನೀವೇ ಲೆಕ್ಕ ಹಾಕಿ. ಇದಲ್ಲದೇ 500 ಕ್ಯಾಂಪ್ಸ್ ಇರುತ್ತವೆ. 100 ಮನೆಗಳು 50 ಮನೆಗಳು, 20 ಮನೆಗಳು ಈ ರೀತಿ ಕ್ಯಾಂಪ್ಸ್ ಇವೆ, ಕೆಲಸ ಮಾಡತಕ್ಕಂಥ ಜನರದ್ದು ಅಥವಾ ಜಮೀನು ಇಟ್ಟುಕೊಂಡಿರುವಂಥವರು ರಸ್ತೆಬದಿಯಲ್ಲಿ ಕ್ಯಾಂಪ್ ಮಾಡಿಕೊಂಡು ಇದ್ದಾರೆ. ಅವರಿಗೂ ಕುಡಿಯುವ ನೀರಿನ ವ್ಯವಸ್ಥೆ ಕೂಡ ಈ ಕೆನಾಲ್‌ನಿಂದಲೇ. ಅದೇ ರೀತಿಯಾಗಿ 200 ಹಳ್ಳಿಗಳು ಬರುತ್ತವೆ, ಆ ಹಳ್ಳಿಗಳಿಗೂ ಕೂಡ ಇದೇ ಕುಡಿಯುವ ನೀರಿನ ವ್ಯವಸ್ಥೆ ಇದೆ. ಹೀಗೆ ಹಳ್ಳಿಗಳಿಗೆ, ಮೂರು ಪಟ್ಟಣಗಳಿಗೆ ಮತ್ತು ಸುಮಾರು ಮೂರು ಲಕ್ಷದ ಐವತ್ತು ಸಾವಿರ ಎಕರೆಗೆ ನೀರಾವರಿ ಆಗತಕ್ಕಂಥಾದ್ದು ಈ ಖರೀಫ್‌ನಲ್ಲಿ. ಆರು ಲಕ್ಷದಲ್ಲಿ ಮೂರು ಲಕ್ಷ ಐವತ್ತು ಸಾವಿರ ಎಕರೆಗೆ ಖರೀಫ್ ಸೀಸನ್‌ನಲ್ಲಿ ನೀರು ಕೊಡತಕ್ಕಂಥಾದ್ದು ಇದೆ. ಸರ್ಕಾರದವರು ಇಷ್ಟೊಂದು ಜನರಿಗೆ ತೊಂದರೆ ಏಕೆ ಮಾಡಿದರು ಎನ್ನತಕ್ಕಂಥಾದ್ದು ನನಗೆ ಇನ್ನೂ ಅರ್ಥವಾಗುತ್ತಿಲ್ಲ. ಇದರ ಬಗ್ಗೆ ತಾವು ಸ್ಪಷ್ಟವಾದಂಥ ಹೇಳಿಕೆಯನ್ನು ಕೊಡಬೇಕು ಮತ್ತು ಈ ಲುಕ್ಸಾನು ಆಗಿದ್ದಕ್ಕೆ ಜವಾಬ್ದಾರಿಯನ್ನು ನೀವು, ನಿಮ್ಮ ಸರ್ಕಾರ ವಹಿಸಿಕೊಳ್ಳಬೇಕಾಗುತ್ತದೆ. ಇಲ್ಲದಿದ್ದರೆ ಅವರಿಗೇನಾದರೂ ಒಂದೊಂದು ಸಾವಿರ ರೂಪಾಯಿ, 500ರೂಪಾಯಿ ಕಾಂಪನ್‌ಸೇಷನ್ ಕೊಡುತ್ತೀರಾ? ಏನಾದರೂ ಒಂದು ವ್ಯವಸ್ಥೆ ಆಗಬೇಕಲ್ಲ

ಕೊನೆಯಪಕ್ಷ ಅವರಿಗೆ ಒಂದು ಪರಿಹಾರ ಸಿಗಬೇಕಲ್ಲ. ಇಲ್ಲವೆಂದರೆ ನಿಮ್ಮ ಕೈಯಲ್ಲಿದ್ದ ಕೆಲಸವನ್ನು ನೀವು ವಾರ್ ಫುಟಿಂಗ್ ಮೇಲೆ ಮಾಡುತ್ತೇವೆ ಎಂದು ಹೇಳಿದ್ದಿರಿ, ಅದನ್ನೂ ಕೂಡ ಮಾಡಿಲ್ಲ. ವಾರ್ ಫುಟಿಂಗ್ ರೀತಿಯಲ್ಲಿ ಕೆಲಸವನ್ನು ಮಾಡುವಹಾಗೆ ಇಲ್ಲ, ರೈತರಿಗೆ ನೀರು ಕೊಡುವುದಿಲ್ಲ, ಇನ್ನೊಂದು ಕಡೆ ಕಾಂಪನ್‌ಸೇಷನ್ನೂ ಕೊಡುವುದಿಲ್ಲ. ಕಾಂಪನ್‌ಸೇಷನ್ ಎಲ್ಲರಿಗೂ ಕೊಡುತ್ತಾ ಹೋದರೆ ಇಡೀ ಖಜಾನೆ ಖಾಲಿಯಾಗುತ್ತದೆ ಎನ್ನುವುದನ್ನು ನಾನು ಒಪ್ಪಿಕೊಳ್ಳುತ್ತೇನೆ. ಆದರೆ ನೀವು ಏಕೆ ಈ ಕೆಲಸ ಮಾಡಲಿಲ್ಲ ಎಂದು ನಾನು ಕೇಳುತ್ತೇನೆ. ದುಡ್ಡು ಕೊಡಬೇಕು ಎಂದೇನಾದರೂ ನೀವು ಕೆನಾಲ್ ರಿಪೇರಿ ಮಾಡುವುದನ್ನು ಬಿಟ್ಟು, ಬರೇ 20-30 ಕೋಟಿ ರೂಪಾಯಿ ಕಾಂಪನ್‌ಸೇಷನ್ ಕೊಡಬೇಕು ಎಂದು ನಿರ್ಧಾರ ಮಾಡಿದ್ದೀರೋ, ಹೇಗೆ? ಇನ್ನೊಂದು ಆಶ್ಚರ್ಯದ ಸಂಗತಿ ಎಂದರೆ ಅಲ್ಲಿಗೆ ಒಬ್ಬ ಫುಲ್ ಫ್ಲೆಡ್ಜ್ಡ್ ಚೀಫ್ ಇಂಜಿನಿಯರ್‌ನ್ನು ಹಾಕಿಲ್ಲ. ಇನ್‌ಚಾರ್ಜ್ ಹಾಕಿದ್ದಾರೆ, ಭದ್ರಾ ಪ್ರಾಜೆಕ್ಟಿನಲ್ಲಿ ಇರತಕ್ಕಂಥವರು ಅಲ್ಲಿ ಇನ್‌ಚಾರ್ಜ್. ಅವರು ಅಲ್ಲೂ ಕೆಲಸ ಮಾಡುವ ಹಾಗೆ ಇಲ್ಲ, ಇಲ್ಲೂ ಮಾಡುವ ಹಾಗೆ ಇಲ್ಲ. ಏಕೆಂದರೆ ಎರಡೂ ಕಡೆ ಓಡಾಡಬೇಕು. ಅವರು ಇನ್‌ಎಫಿಷಿಯೆಂಟ್ ಆಗಿದ್ದಾರೋ, ಏನೋ ನನಗೆ ಗೊತ್ತಿಲ್ಲ. ಆದರೆ ನೀವು ಏನು ಇನ್‌ಚಾರ್ಜ್ ಅರೇಂಜ್‌ಮೆಂಟ್ ಮಾಡಬೇಕು ಅಥವಾ ಕೆಲಸದ ಬಗ್ಗೆ ಆಸಕ್ತಿವಹಿಸಬೇಕು, ಆ ಆಸಕ್ತಿಯವನ್ನು ನಿಮ್ಮ ಇಲಾಖೆ ವಹಿಸಲಿಲ್ಲ ಎನ್ನತಕ್ಕಂಥ ಮಾತನ್ನು ನಾನು ಹೇಳುತ್ತೇನೆ. ಇದು ನನ್ನ ನೇರವಾದ ಆಪಾದನೆ. ಮತ್ತು ಇನ್ನೊಂದು ಸಂಗತಿ ಎಂದರೆ ಕೆ.ಸಿ.ರೆಡ್ಡಿಯವರ ಎಕ್ಸ್‌ಪರ್ಟ್ ಕಮಿಟಿ ರಿಪೋರ್ಟ್ ಏನಿದೆ, ಆ ಕಮಿಟಿ ರಿಪೋರ್ಟನ್ನು ನೀವು ಹಂತಹಂತವಾಗಿ ಇಂಪ್ಲಿಮೆಂಟ್ ಮಾಡಿದಿರಿ, ಅದು ಯಾವ ರೀತಿಯಾಗಿ ಮಾಡುತ್ತಿದ್ದೀರಿ,

(ಈ ಹಂತದಲ್ಲಿ ಅಧ್ಯಕ್ಷರು ಪೀಠವನ್ನಲಂಕರಿಸಿದರು)

ಎಷ್ಟರ ಮಟ್ಟಿಗೆ ಮಾಡುತ್ತಿದ್ದೀರಿ ಮತ್ತು ಎಲ್ಲಿ ನೀವು ಇದರ ಬಗ್ಗೆ ಕಾಳಜಿ ವಹಿಸಿಕೊಂಡು ಹಣವನ್ನು ಸಂಗ್ರಹಿಸಿ ಇದರ ದುರಸ್ತಿಗಾಗಿ ತಾವು ಹಣ ಬಿಡುಗಡೆ ಮಾಡುತ್ತೀರಿ ಎನ್ನತಕ್ಕಂಥಾದ್ದನ್ನು ಹೇಳಬೇಕು. 20 ಕೋಟಿ ರೂಪಾಯಿಗಳಲ್ಲಿ ಈಗ ಜುಲೈ ತಿಂಗಳೊಳಗಾಗಿ ಖರ್ಚು ಮಾಡಿರುವ ಹಣವೆಷ್ಟು? ಎಷ್ಟು ಖರ್ಚಾಗಿದೆ? ಎಷ್ಟು ಕಾಂಟ್ರಾಕ್ಟರುಗಳಿಗೆ ಕೊಡತಕ್ಕಂಥಾದ್ದು ಬಾಕಿ ಇದೆ? ಮತ್ತು ನಮ್ಮಲ್ಲಿ ಇದರ ಬಗ್ಗೆ ಎಷ್ಟು ಬಜೆಟ್ ಪ್ರಾವಿಷನ್ ಇದೆ? ಎನ್ನತಕ್ಕಂಥಾದ್ದನ್ನು ಕೂಡ ಈ ಸದನಕ್ಕೆ ತಾವು ತಿಳಿಸಬೇಕು ಎನ್ನತಕ್ಕಂಥ ಮಾತನ್ನು ಈ ಸಂದರ್ಭದಲ್ಲಿ ಹೇಳುತ್ತೇನೆ. ಇನ್ನೊಂದು ಸಣ್ಣ ವಿಷಯವನ್ನು ಪ್ರಸ್ತಾಪ ಮಾಡುತ್ತೇನೆ, ಏಕೆಂದರೆ ಅದು ಈಗಾಗಲೇ ಇವತ್ತಿನ ದಿವಸ ಪೇಪರ್‌ನಲ್ಲಿ ಬಂದಿದೆ, ಜುರಾಲಾ ಪ್ರಾಜೆಕ್ಟ್ ಬಗ್ಗೆ. ಜುರಾಲಾ ನಾಳೆ ತೆಗೆದುಕೊಳ್ಳೋಣ ಇವತ್ತು ಬೇಡ ಎಂದರೆ ಆಯಿತು. ಆದರೆ ಅದರ ಬಗ್ಗೆ ತಮ್ಮ ಸ್ಪಷ್ಟವಾದಂಥ ನಿಲುವನ್ನು ಹೇಳಬೇಕು. ಯಾವರೀತಿಯಾಗಿ ರೈತರಿಗೆ ಸಹಾಯ ಮಾಡುತ್ತೀರಿ ಮತ್ತು ಈಗ ಆದಂಥ ಲುಕ್ಸಾನನ್ನು ತುಂಬಿ ಕೊಡುವುದಕ್ಕೆ ಏನು ವ್ಯವಸ್ಥೆ ಮಾಡುತ್ತೀರಿ ಎನ್ನತಕ್ಕಂಥಾದ್ದನ್ನು

ಹೇಳದೇ ಹೋದರೆ ಆ ಭಾಗದಲ್ಲಿ ಜನ ಇವತ್ತು ಬಾಯಿ ಮುಚ್ಚಿಕೊಂಡು ಕುಳಿತಿದ್ದಾರೆ, ಅಲ್ಲಿ ಏನೂ ಗಲಾಟೆ ಇಲ್ಲ ಎಂದು ತಾವು ತಿಳಿದುಕೊಂಡರೆ, ಅಲ್ಲಿ ಜನ ಇವತ್ತಲ್ಲ ನಾಳೆ ದಂಗೆ ಏಳುತ್ತಾರೆ. ಅದಕ್ಕೆ ನೀವೇ ಕಾರಣಕರ್ತರು ಆಗುತ್ತೀರಿ, ಅಲ್ಲಿ ಏನಾದರೂ ಲಾ ಅಂಡ್ ಆರ್ಡರ್ ಪ್ರಾಬ್ಲಮ್ ಕ್ರಿಯೇಟ್ ಆದರೆ ಆ ಪ್ರಾಬ್ಲಮ್ಮಿಗೆ ಸರ್ಕಾರವೇ ಹೊಣೆ ಎನ್ನತಕ್ಕಂಥ ಮಾತನ್ನು ನಾನು ಇವತ್ತು ಹೇಳಬೇಕಾಗುತ್ತದೆ. ಅದಕ್ಕಾಗಿ ತಮ್ಮ ಸ್ಪಷ್ಟವಾದಂಥ ಉತ್ತರವನ್ನು ನಾನು ನಿರೀಕ್ಷೆ ಮಾಡುತ್ತೇನೆ. ತಾವು ಯಾವ ರೀತಿಯಾಗಿ ಇದಕ್ಕೆ ಪರಿಹಾರವನ್ನು ಒದಗಿಸಿ ಕೊಡುತ್ತೀರಿ ಎನ್ನತಕ್ಕಂಥಾದ್ದನ್ನು ತಮ್ಮ ಮುಖಾಂತರ ನಾನು ಕೇಳುತ್ತಿದ್ದೇನೆ.

ಅಧ್ಯಕ್ಷರು:- ಇಲ್ಲ, ಈಗ ಯಾರಿಗೂ ಅವಕಾಶವಿಲ್ಲ. ನಾನು ತಮಗೆ ವಿನಂತಿ ಮಾಡಿಕೊಳ್ಳುತ್ತೇನೆ. ಜೀರೋ ಅವರ್‌ಅನ್ನು ಎಷ್ಟು ಹೊತ್ತಿನಿಂದ ಎಷ್ಟು ಹೊತ್ತಿನವರೆಗೆ ತೆಗೆದುಕೊಂಡು ಹೋಗಿದ್ದೀರಿ ಎಂದು ತಾವೇ ತಿಳಿದುಕೊಳ್ಳಿ, ಆಲೋಚನೆ ಮಾಡಿ. ಅದಕ್ಕಾಗಿ ನಾಳೆಯಿಂದ ಜೀರೋ ಅವರ್‌ಅನ್ನು ನಾನು ಕ್ಲೋಸ್ ಮಾಡುತ್ತೇನೆ. ನಾಳೆಯಿಂದ ಜೀರೋ ಅವರ್ ಇಲ್ಲ. ನೀವು ಅಡ್ಜರ್ನ್‌ಮೆಂಟ್ ಮೋಷನ್ ಕಳುಹಿಸುವುದೋ, ನಿಯಮ 69ಕ್ಕೆ ಕಳುಹಿಸುವುದೋ ಏನಾದರೂ ಆದರೆ ನಾನು ಏನಾದರೂ ಮಾಡಬಹುದು.

ಶ್ರೀ ಬಿ.ಎಸ್.ಯಡಿಯೂರಪ್ಪ:- ತಾವು ಏನು ತೀರ್ಮಾನ ತೆಗೆದುಕೊಳ್ಳುತ್ತೀರಿ ಅದಕ್ಕೆ ನಮ್ಮದೇನೂ ಅಭ್ಯಂತರವಿಲ್ಲ.

ಅಧ್ಯಕ್ಷರು:- ಇವತ್ತು ತಾವು ಮಾತನಾಡಿ

ಶ್ರೀ ಬಿ.ಎಸ್.ಯಡಿಯೂರಪ್ಪ:- ಅಧ್ಯಕ್ಷರೇ, ತಾವು ಜೀರೋ ಅವರ್‌ನಲ್ಲಿ ಯಾವ ನಿಯಮಾವಳಿಯಂತೆ ನಾವು ನಡೆದುಕೊಳ್ಳಬೇಕು ಎಂದು ಹೇಳುತ್ತೀರಿ ಅದಕ್ಕೆ ನಾವು ತಲೆ ಬಾಗುತ್ತೇವೆ. ಅದರಲ್ಲಿ ಎರಡು ಮಾತಿಲ್ಲ. ಇದು ಅತ್ಯಂತ ಪ್ರಾಮುಖ್ಯವಾದ ವಿಷಯವಾದ್ದರಿಂದ, ನಾನೂ ಸ್ಥಳಕ್ಕೆ ಹೋಗಿ ಬಂದಿದ್ದರಿಂದ, ನಂತರ ತಮ್ಮ ಕೊಠಡಿಗೆ ಬಂದು ಇದನ್ನು ಪ್ರಸ್ತಾಪ ಮಾಡುವುದಕ್ಕೆ...

ಅಧ್ಯಕ್ಷರು:- ಇವತ್ತು ನಾನು ಅಡ್ಡಿಪಡಿಸುವುದಿಲ್ಲ.

ಶ್ರೀ ಬಿ.ಎಸ್.ಯಡಿಯೂರಪ್ಪ:- ನಾಳೆಯಿಂದ ತಾವು ಏನು ಹೇಳುತ್ತೀರೋ ಅದರಂತೆ ನಡೆದುಕೊಳ್ಳುತ್ತೇವೆ.

ಅಧ್ಯಕ್ಷರು:- ನಾಳೆಯಿಂದ ಜೀರೋ ಅವರ್ ಇಲ್ಲ. ಮೊದಲು ಪ್ರಶ್ನೋತ್ತರ ವೇಳೆ. ಪ್ರಶ್ನೋತ್ತರವನ್ನು ಮುಗಿಸಿ ಮುಂದಿನ ಕೆಲಸಕ್ಕೆ ಹೋಗುತ್ತೇನೆ.

ಶ್ರೀ ಬಿ.ಎಸ್.ಯಡಿಯೂರಪ್ಪ:- ಆಗಬಹುದು. ಅದಕ್ಕೆ ಏನೂ ತೊಂದರೆ ಇಲ್ಲ.

ಅಧ್ಯಕ್ಷರು:- ಏಕೆಂದರೆ ಇವತ್ತಿನವರೆಗೆ ಜೀರೋ ಅವರ್‌ಅನ್ನು ಆಡಳಿತ ಪಕ್ಷದ ಒಬ್ಬ

ಸದಸ್ಯರೂ ಉಪಯೋಗಿಸಲ್ಲ, ನೀವೇ ಸಂಪೂರ್ಣವಾಗಿ ವಿನಿಯೋಗಿಸಿಕೊಳ್ಳುತ್ತಿದ್ದೀರಿ.

ಶ್ರೀ ಬಿ.ಎಸ್.ಯಡಿಯೂರಪ್ಪ:- ಅವರು ಸುಖವಾಗಿ ಇದ್ದಾರೆ. ಆದ್ದರಿಂದ ಅವರಿಗೆ ಬೇಡ.

ಅಧ್ಯಕ್ಷರು:- ಅವಕಾಶದ ಸದುಪಯೋಗವಾಗಿಲ್ಲ ಎಂದು ಮನವರಿಕೆಯಾಗಿದೆ. ಆದ್ದರಿಂದ...

ಶ್ರೀ ಎಂ.ಮಲ್ಲಿಕಾರ್ಜುನ ಖರ್ಗೆ:- ಅಧ್ಯಕ್ಷರೇ, ನಾನು ಒಪ್ಪಿಕೊಳ್ಳುತ್ತೇನೆ. ಅವರು ಜೀರೋ ಅವರ್‌ನಲ್ಲಿ ಕೋರಂ ಆಗುವಷ್ಟೂ ಜನ ಬರುವುದಿಲ್ಲ.

ಅಧ್ಯಕ್ಷರು:- ಕೋರಂ ಆಗದಿದ್ದರೆ ನಷ್ಟವೇನು? ನಾನು ಅಡ್ಜರ್ನ್ ಮಾಡಿ ಹೋಗುತ್ತೇನೆ.

ಶ್ರೀ ಬಿ.ಎಸ್.ಯಡಿಯೂರಪ್ಪ:- ಇಲ್ಲಿ ನಾವು ಕುಳಿತುಕೊಳ್ಳುತ್ತೇವೆ. ಅದಕ್ಕೆ ನಾವು ಅವಕಾಶ ಕೊಡುವುದಿಲ್ಲ.

(ಗೊಂದಲ)

ಶ್ರೀ ಎಂ.ಮಲ್ಲಿಕಾರ್ಜುನ ಖರ್ಗೆ:- ಅವರಿಗೆ ಬೇಡ ಎಂದರೆ ನಮಗಾದರೂ ಬೇಕಲ್ಲ.

ಅಧ್ಯಕ್ಷರು:- ಈಗ ಸನ್ಮಾನ್ಯ ವಿರೋಧ ಪಕ್ಷದ ನಾಯಕರು.

ಶ್ರೀ ಬಿ.ಎಸ್.ಯಡಿಯೂರಪ್ಪ:- ಅಲ್ಲಿ ಜನಕ್ಕೆ ನೀರು ಇಲ್ಲದೇ ಸಾಯುತ್ತಿದ್ದಾರೆ. ಊಟ ಆಮೇಲೆ ಮಾಡೋಣ, ಏನೂ ತೊಂದರೆ ಇಲ್ಲ. ಖರ್ಗೆಯವರೇ ನೀವು ಹೋಗಿ ಪರವಾಗಿಲ್ಲ. ಅಧ್ಯಕ್ಷರೇ ಈಗ ನಾನು ಊಟ ಮಾಡಿದ್ದೇನೆಯೇ? ನಾನು ಇಲ್ಲೇ ಕುಳಿತಿದ್ದೇನೆ.

ಅಧ್ಯಕ್ಷರು:- ಖರ್ಗೆಯವರು ಮಾಡುವ ಊಟ ನೀವು ಮಾಡುವುದಿಲ್ಲ. ಅಲ್ಲಿ ಶಿವರಾಮೇಗೌಡರು ಊಟ ತರಿಸಿದ್ದಾರೆ. ಚೆನ್ನಾಗಿ ಇದೆ. ಇವತ್ತು ಊಟ ಚೆನ್ನಾಗಿ ಇರುವುದರಿಂದ ಕರೆಯದೇ ಇರುವವರೆಲ್ಲಾ ಬಂದು ಕುಳಿತುಬಿಟ್ಟಿದ್ದಾರೆ. ಖರ್ಗೆಯವರಿಗೆ ಎಲ್ಲಿ ಊಟ ಇಲ್ಲದೇ ಆಗುತ್ತದೋ ಎಂದು ಹೇಳಿದೆ ಅಷ್ಟೆ. ನೀವು ಕರೆದರೂ ವಾಟಾಳರು ಬರುವುದಿಲ್ಲ. ಖರ್ಗೆಯವರೆ ತಾವು ಹೋಗಿಬನ್ನಿ.

+ ಶ್ರೀ ಬಿ.ಎಸ್.ಯಡಿಯೂರಪ್ಪ:- ಸನ್ಮಾನ್ಯ ಅಧ್ಯಕ್ಷರೇ, ನಿಜವಾಗಿ ನಾನು ತಮಗೆ ಅಭಿನಂದನೆ ಸಲ್ಲಿಸುತ್ತೇನೆ. ಈ ಜೀರೋ ಅವರ್‌ನಿಂದ ಬಹಳ ಪ್ರಾಮುಖ್ಯವಾದಂಥ ವಿಷಯಗಳನ್ನು ಪ್ರಸ್ತಾಪ ಮಾಡುವುದಕ್ಕೆ ಅಗಿದೆ, ಸರ್ಕಾರ ಉತ್ತರ ಕೊಡುತ್ತಿದೆ, ಜನತೆಗೆ ನ್ಯಾಯ ಸಿಗುತ್ತಿದೆ. ದಯಮಾಡಿ ಇದಕ್ಕೆ ಬಹಳ ಕಡಿಮೆ ಸಮಯ ತೆಗೆದುಕೊಳ್ಳಬೇಕು ಎನ್ನುವ ತಮ್ಮ ಸಲಹೆಯನ್ನು ನಾನು ಖಂಡಿತವಾಗಿ ಒಪ್ಪುತ್ತೇನೆ. ಇದು ನೀರಾವರಿ

ಸಚಿವರ ಗಮನಕ್ಕಾಗಿ. ಕರ್ನಾಟಕ ರಾಜ್ಯದಲ್ಲಿ ಅತ್ಯಂತ ಒಂದು ದೊಡ್ಡ ನೀರಾವರಿ ಇರುವಂಥ ಒಂದು ಕಾಲುವೇ ಈ ತುಂಗಭದ್ರಾ ಎಡದಂಡೆ ನಾಲೆ, ಇದು ತಮಗೆ ಗೊತ್ತಿದೆ. ನಾಲ್ಕೂವರೆ ಲಕ್ಷ ಎಕರೆಗೆ ನೀರಾವರಿಗೆ ಉಪಯೋಗವಾಗುವಂಥಾದ್ದು.

ನಾನು 20.6.1996ರಂದು ನಾನು ಆ ಸ್ಥಳಕ್ಕೆ ಹೋಗಿದ್ದೆ. ಜಿರೋ ಕಿಲೋಮೀಟರ್‌ನಿಂದ 36ನೇ ಕಿಲೋಮೀಟರ್‌ನವರೆಗೆ ನಡೆಯುತ್ತಿರುವ ಕಾಮಗಾರಿಯು ನಡೆಯುತ್ತಿರುವ ಚಾನಲ್‌ನ ಒಳಗಡೆಯಲ್ಲಿ ಇಳಿದು ಓಡಾಟವನ್ನು ಮಾಡಿಕೊಂಡು. 22.6.1996ರಂದು ನಾನು ಮಾನ್ಯ ನೀರಾವರಿಯ ಸಚಿವರಿಗೆ ಒಂದು ಪತ್ರವನ್ನು ಬರದೆ. ಮಾನ್ಯ ನೀರಾವರಿಯ ಸಚಿವರು 2.7.1996ರಂದು ಪತ್ರವನ್ನು ಬರೆದು ಉತ್ತರವನ್ನು ಸಹ ಕೊಟ್ಟಿದ್ದಾರೆ. ನಾನು ಪತ್ರದಲ್ಲಿಯೂ ಸಹ ಹೇಳಿದ್ದೇನೆ ನಾನು ತುಂಗಾಭದ್ರ ಎಡದಂಡೆ ನಾಲೆಯಮೇಲೆ ಜಿರೋ ಕಿಲೋಮೀಟರ್‌ನಿಂದ 36ನೇ ಕಿಲೋಮೀಟರ್ ಏನು ಓಡಾಟವನ್ನು ಮಾಡಿದೆ ಅಲ್ಲಿ ದುರಸ್ತಿ ಮಾಡುವಂತಹ ಸಂದರ್ಭದಲ್ಲಿ ಉಚ್ಚನ್ಯಾಯಾಲಕ್ಕೆ ಅಲ್ಲಿಯ ರೈತರು ಅಪೀಲ್ ಹೋದರು ಏಕೆಂದರೆ ನೀವು ಸರ್ಕಾರದವರು ಸಮಯಕ್ಕೆ ಸರಿಯಾಗಿ ರಿಪೇರಿಯನ್ನು ಮಾಡುವುದಿಲ್ಲ. $4^{1}/_{2}$ ಲಕ್ಷ ಎಕರೆ ನೀರಾವರಿಯಾಗುವಂಥದ್ದು ರಿಪೇರಿಯಾಗದೇ ನಾವು ಬೀದಿ ಪಾಲಾಗುವಂತಹ ಸಂದರ್ಭ ಇದೆ. ಹಿಂದೆ ಸರ್ಕಾರದವರು ಕೊಟ್ಟಂತಹ ಯಾವುದೇ ಭರವಸೆಯನ್ನು ಈಡೇರಿಸಿಲ್ಲವೆಂದು ಅಲ್ಲಿಯ ರೈತರು ಕೋರ್ಟ್‌ಗೆ ಹೋದರು. ಕೋರ್ಟ್‌ನಲ್ಲಿ ನೀರಾವರಿಯ ಇಲಾಖೆಯ ಅಧಿಕಾರಿಗಳು ರೈತರಿಗೆ ಮುಚ್ಚಳಿಕೆಯನ್ನು ಬರೆದುಕೊಟ್ಟರು. ಏನೆಂದು ಎಂದರೆ 75 ದಿವಸಗಳಲ್ಲಿ ಅದನ್ನು ರಿಪೇರಿ ಮಾಡಿಕೊಡುತ್ತೇವೆ ಮತ್ತು ಜುಲೈ 1996ಕ್ಕೆ ನೀರನ್ನು ಕೊಡುತ್ತೇವೆಂದು ಹೇಳಿದ ಮೇಲೆ ರೈತರು ಒಪ್ಪಿಕೊಂಡು, ಕೆಲಸವು ಸಹ ಪ್ರಾರಂಭವಾಯಿತು. ಇವತ್ತು ಏನಾಗಿದೆ ಡೆಕ್ಕನ್ ಹೆರಾಲ್ಡ್ ಮತ್ತು ಪ್ರಜಾವಾಣಿ ಪತ್ರಿಕೆ ಎಲ್ಲಾ ಪತ್ರಿಕೆಗಳಲ್ಲಿ ಏನು ಬಂದಿದೆ ಎಂದರೆ Deccan Herald, Raichur, July 14th "The delay in Tungabhadra canal rapair work may cause 175 crores loss. The delay in releasing water is bound to hit the crop cultivation in an estimated area of 3.5 lakh acres out of a total of 6 lakh acres of irrigated land coming under the Left Bank Canal. Farmers have made all preparations to raise paddy, spilling and transplant in an estimated area of two lakh acres assuming that water would be available in the canal by first or second week of this month. But prolonged delay in repair work has upset the calculations of Ayacut farmers" ಸ್ವಾಮಿ ಇಲ್ಲಿ ಎರಡು ಮೂರು ಸಮಸ್ಯೆಗಳಾಗಿವೆ. ಮೊದಲನೆಯಾದಾಗಿ, ಅವರು ಏಕೆ ರೈತರು ಕೋರ್ಟ್‌ಗೆ ಹೋದರು? ಚಾನಲ್‌ನ ರಿಪೇರಿಯನ್ನು ಸಮಯಕ್ಕೆ

ಸರಿಯಾಗಿ ಮಾಡುವುದಿಲ್ಲವೆಂಬ ವಿಶ್ವಾಸವಿಲ್ಲದೇ ಹೋದರು. ರಿಪೇರಿಯನ್ನು ಏಕೆ ಲೇಟ್ ಮಾಡುತ್ತಿದ್ದಾರೆ. ಮಳೆಗಾಲ ಪ್ರಾರಂಭವಾದಾಗ ರಿಪೇರಿಯ ಕೆಲಸವನ್ನು ಪ್ರಾರಂಭ ಮಾಡಿದರೆ ಕೋಟ್ಯಾಂತರ ರೂಪಾಯಿಗಳು ಖರ್ಚಾಗುತ್ತದೆ ಕಂಟ್ರಾಕ್ಟ್‌ರ್‌ಗಳು ದೊಡ್ಡ ದೊಡ್ಡ ಮುಖಂಡರು ಇದ್ದಾರೆ. ನೀವು ಆ ಸ್ಥಳಕ್ಕೆ ಹೋಗಿ ಬನ್ನಿ. ಆ ಪಕ್ಷದವರು ಈ ಪಕ್ಷದವರು ಅಲ್ಲ. ಮುಖಂಡರುಗಳೇ ಅಲ್ಲಿ ಗುತ್ತಿಗೆದಾರರು. ಅವನು ಹೇಳಿದಂತೆಯೇ ಅಲ್ಲಿ ಗುತ್ತಿಗೆಯನ್ನು ಕೊಡಬೇಕು. ಅವನು ಹೇಳಿದಷ್ಟು ಕೆಲಸವನ್ನು ಮಾಡಿಕೊಟ್ಟರೆ, ಕೋಟ್ಯಾಂತರ ರೂಪಾಯಿಗಳ ಬಿಲ್ ಮಾಡಿಕೊಡಬೇಕು. ಈ ರೀತಿಯಾದಂತಹ ಅನಿಷ್ಟ ಪದ್ಧತಿಯು ಬೆಳೆದುಕೊಂಡು ಬಂದಿರುವುದರಿಂದ, ಇವತ್ತು ಜಿರೋ ಕಿಲೋಮೀಟರ್‌ನಿಂದ 36ನೇ ಕಿಲೋಮೀಟರ್‌ರವರೆಗಿನ ಪ್ರಾರಂಭದಲ್ಲಿ ರಿಪೇರಿಯಾಗದಿದ್ದರೆ ಡ್ಯೆಲ್ಟಾಂಡ್‌ಗೆ ನೀರು ಹೋಗಬೇಕಾದರೆ 4200ನಿಂದ 4400 ಕ್ಯೂಸೆಕ್ಸ್ ನೀರನ್ನು ಬಿಡಬೇಕಾಗುತ್ತದೆ. ಆಗ ಮಾತ್ರ ಟೇಲ್ ಎಂಡ್‌ಗೆ ನೀರು ಹೋಗುತ್ತದೆ. ಈ ಫೋಟೋವನ್ನು ನೋಡಿ ಇದರಲ್ಲಿ ಕೆಲಸವನ್ನು ಮಾಡುವಂತಹ ವಾಹನಗಳೆಲ್ಲವು ಮಳೆಯಲ್ಲಿ ಸಿಕ್ಕಿಕೊಂಡಿದೆ. ನಾನು ಆ ಸ್ಥಳಕ್ಕೆ ಮಳೆಗಾಲದಲ್ಲಿ ಹೋಗಿದ್ದೆ. ಇವತ್ತು ಸಹ ಅದೇ ಸ್ಥಿತಿಯು ಇದೆ. ಸರಿಯಾದಂತಹ ರಿಪೇರಿಯ ಕೆಲಸವು ಅಲ್ಲಿ ಆಗುತ್ತಿಲ್ಲ. ನಾನು ತಮ್ಮ ಮೂಲಕ ಸರ್ಕಾರವನ್ನು ಕೇಳುವುದೇನೆಂದರೇ ಒಂದು ಸರ್ಕಾರ ಅಂತ ಇರಬೇಕಾದರೆ, ದೊಡ್ಡ ಅಚ್ಚುಕಟ್ಟುದಾರರು ಅಲ್ಲಿ ಇರಬೇಕಾದರೆ ಸಮಯಕ್ಕೆ ಸರಿಯಾಗಿ ಟೈಮ್ ಬೌಂಡ್ ಪ್ರೋಗ್ರಾಮನ್ನು ಹಾಕಿಕೊಂಡು ಚಾನಲ್ ರಿಪೇರಿಯನ್ನು ಮಾಡಿ ಮುಗಿಸಬೇಕಾಗಿತ್ತು. ಅದನ್ನು ಮಾಡುವುದರಲ್ಲಿ ನಿಧಾನ ಮಾಡಬಾರದಿತ್ತು. ಇದರ ಪರಿಣಾಮವಾಗಿ ತಾವು ಹೇಳುವ ಪ್ರಕಾರವಾಗಿ from July 1st undertaking ತೆಗೆದುಕೊಂಡು ಕೊಡುವುದಕ್ಕೆ ಆಗುವುದಿಲ್ಲ. ಈಗಾಗಲೇ 17ನೇ ಜುಲೈ 1996 ಆಯಿತು. ನೀವು 1ನೇ ಆಗಸ್ಟ್‌ಗೆ ನೀರನ್ನು ಕೊಟ್ಟರೆ ಏನು ಪರಿಣಾಮವಾಗುತ್ತದೆ. ಈಗಾಗಲೇ ರೈತರು ಪಾತಿಯನ್ನು ಮಾಡಿ ಬಿತ್ತನೆ ಮಾಡಬೇಕಾಗಿತ್ತು. ರೈತಾಪಿಯ ಕೆಲಸ ಈಗಾಗಲೇ ಪ್ರಾರಂಭವಾಗಬೇಕಾಗಿತ್ತು. 15ನೇ ಆಗಸ್ಟ್‌ನವರೆಗಾದರೂ ಈ ಕೆಲಸ ಆಗುತ್ತದೆ ಎಂಬ ವಿಶ್ವಾಸ ನಮಗೆ ಇಲ್ಲ. ಆಮೇಲೆ ಅವನು ಕ್ಯಾಪ್‌ನ್ನು ಹಾಕಿ ಕೋಟ್ಯಾಂತರ ರೂಪಾಯಿಗಳನ್ನು ವ್ಯವಸಾಯಕ್ಕಾಗಿ ತೊಡಗಿಸುತ್ತಾನೆ. ವರ್ಷದ ಕೊನೆಯಲ್ಲಿ ಬೆಳೆಯುವ ವಡೆ ಬಂದಂತಹ ಕಾಲದಲ್ಲಿ ವ್ಯವಸಾಯಕ್ಕೆ ನೀರು ಸಿಗುವುದಿಲ್ಲ. ಅವನು ಬೀದಿಪಾಲಗುತ್ತಾನೆ. ಮುಂದಿನ ಬೇಸಿಗೆ ಬೆಳೆಯು ಸಹ ಅವನ ಕೈ ಸೇರುವುದಿಲ್ಲ. ಈ ರೀತಿಯಾದಂತಹ ಪರಿಸ್ಥಿತಿಯು ರೈತರಿಗೆ ಒದಗಿಬಂದಿದೆ. ನಾನು ತಮಗೆ ಆ ಸ್ಥಳದಲ್ಲಿ $3^{1}/_{2}$ ಲಕ್ಷ ರೂಪಾಯಿಯ ಕೆಲಸವಾಗಿದೆ ಎಲ್.ಒ.ಸಿ ಬಿಡುಗಡೆಯಾಗಿಲ್ಲ ಎಂದು ಹೇಳಿದ್ದೆ, ನನಗೆ ಪತ್ರವನ್ನು ಬರೆದ ಮೇಲೆ ಹಣ ಬಿಡುಗಡೆ ಮಾಡಿದ್ದೀರಾ ಎಂದು ಕೇಳಿದೆ. ನಾನು ಹಣವನ್ನು ಬಿಡುಗಡೆ ಮಾಡಿ ಎಂದು ಕೇಳುವುದಕ್ಕೆ ಬಂದಿಲ್ಲ. ಅಲ್ಲಿ ಕಳಪೆ ಕಾಮಗಾರಿಯ ಕೆಲಸ ನಡೆಯುತ್ತಿದೆ. ಟೈಮ್ ಬೌಂಡ್ ಪ್ರೋಗ್ರಾಮ್‌ನಂತೆ ಅಲ್ಲಿ ಕೆಲಸ ಆಗುತ್ತಿಲ್ಲ. ಅಲ್ಲಿ ಖಾಯಂ ಆಗಿ ಒಬ್ಬ ಚೀಫ

ಇಂಜಿನಿಯರ್ ಇಲ್ಲ. ಅಲ್ಲಿ ನಡೆಯುತ್ತಿರುವ ಕೆಲಸದ ಬಗ್ಗೆ ಹೇಳುವವರು ಕೇಳುವವರು ಯಾರು ಇಲ್ಲ. ಅದನ್ನು ಸ್ಥಳಕ್ಕೆ ಭೇಟಿ ಕೊಟ್ಟು ನೋಡಿಕೊಂಡು ಬಂದೆ. ಇವತ್ತು ನೀರಾವರಿಯ ಬಗ್ಗೆ ಕಳಕಳಿ ಇರುವಂತಹ ಒಬ್ಬ ಸಚಿವರ ಕಾಲದಲ್ಲಿ ಈ ಪತ್ರವು ತಲುಪಿದ 24ಗಂಟೆಗಳ ಒಳಗಾಗಿ ತಾವು ಆ ಸ್ಥಳಕ್ಕೆ ಹೋಗಿ ಬರುತ್ತೀರೆಂದು ನಾನು ಭಾವಿಸಿದ್ದೆ ಅಥವಾ ಇಲ್ಲಿರತಕ್ಕಂತಹ ಅಧಿಕಾರಿಗಳನ್ನು ಅಲ್ಲಿಗೆ ಕಳುಹಿಸಿಕೊಟ್ಟು ಬೇಗ ಕಾಮಗಾರಿಯನ್ನು ಆಗುವುದಕ್ಕೆ ನೋಡಿಕೊಳ್ಳುವಂತಹ ಜವಾಬ್ದಾರಿಯಿಂದ ಆ ಕೆಲಸವನ್ನು ಸಹ ಮಾಡದೇ ಸುಮಾರು $4^{1}/_{2}$, 5 ಲಕ್ಷ ಎಕರೆ ನೀರವಾರಿಯ ಜಮೀನಿನಲ್ಲಿ ವ್ಯವಸಾಯವನ್ನು ಮಾಡದೇ ಇವತ್ತು ಬೀದಿಪಾಲಾಗುವಂತಹ ಸಂದರ್ಭ ಬಂದಿದೆ. ಅದಕ್ಕಾಗಿ ಇದರ ಬಗ್ಗೆ ಶ್ರೀ ಮಲ್ಲಿಕಾರ್ಜುನ ಖರ್ಗೆಯವರು ಈ ಸದನದಲ್ಲಿ ವಿವರವಾಗಿ ಹೇಳಿದ್ದಾರೆ ನಾನು ಇಲ್ಲಿ ಎಷ್ಟು ನಿಮಷಗಳ ಕಾಲ ಮಾತನಾಡಿದೆ ಎಂಬುದು ಮುಖ್ಯವಲ್ಲ. ನಾನು ಏನು ತುಂಗಾ ಭದ್ರ ಎಡದಂಡೆ ನಾಲೆಯ ಏರಿಯಾದಲ್ಲಿ ಬರತಕ್ಕಂತಹ ರೈತರ ಪರವಾಗಿ ಹೇಳಬೇಕಾಗಿದೆ ಎಂದರೆ ಈಗ ರಿಪೇರಿಯಾಗುತ್ತದೆಯಲ್ಲಾ ಅದನ್ನು ತಾವು ರಿಪೇರಿಯಾದಂತಹ ಕಡೆಗಳಲ್ಲಿ ಹೋಗಿ ನೋಡಿಕೊಂಡು ಬನ್ನಿ. ಈಗ ಏನು ರಿಪೇರಿಯಾಗುತ್ತದೆ ಅದು ಪುನಃ ರಿಪೇರಿಯಾಗುತ್ತದೆ ಒಂದು ಕಿಲೋಮೀಟರ್‌ಗೆ ಅಂದಾಜಿನ ಪ್ರಕಾರವಾಗಿ ಒಂದರಿಂದ ಒಂದೂವರೆ ಕೋಟಿ ರೂಪಾಯಿಗಳು ಖರ್ಚು ಮಾಡುತ್ತಿದ್ದೀರಿ. ಆದರೂ ಸಹ ಅಲ್ಲಿ ರಿಪೇರಿ ಮಾಡಿರುವಂಥಾದ್ದು ಬಂದೊಬಸ್ತು ಆಗುವುದಿಲ್ಲ. ಅಲ್ಲಿಯೇ ನೀರು ಸೋರುತ್ತದೆ. ಅಲ್ಲಿ ಕಳಪೆ ಕಾಮಗಾರಿಯಾಗುತ್ತಿದೆ ಅಲ್ಲಿಯೆ ಕಂಟ್ರ್ಯಾಕ್ಟರ್‌ಗಳು, ಅಲ್ಲಿರತಕ್ಕಂತಹ ಅಧಿಕಾರಿಗಳು ಪುಡಾರಿಗಳು ಶಾಮೀಲಾಗಿ ಹೀಲ್ ಮಾಡಿಕೊಂಡು ಹೋಗುತ್ತಿದ್ದಾರೆ. ಈಗ ಮಳೆಗಾಲವಾಗಿರುವುದರಿಂದ ಅಲ್ಲಿ ಮಳೆಯು ಬರುತ್ತದೆ. ರಿಪೇರಿಯಾಗಿರತಕ್ಕಂತಹ ಚಾನಲ್ ಎಲ್ಲಾ ಮಳೆಯ ನೀರಿನಲ್ಲಿ ಕಿತ್ತುಕೊಂಡು ಹೋಗುತ್ತಿದೆ, ಇವರು ಬಿಲ್ ಮಾಡಿಕೊಡಿ ಎಂದು ಹೇಳುತ್ತಾರೆ. ಆದುದರಿಂದ ದಯಮಾಡಿ ಅಲ್ಲಿ ತನಿಖೆಯನ್ನು ಮಾಡಿ. ಸರಿಯಾಗಿ ಕಾಮಗಾರಿಯು ನಡೆಯುವಂತೆ ಮಾಡಿ. ತಾವು ಇವತ್ತು ಇದನ್ನು ಮಾಡುವುದನ್ನು ಬಿಟ್ಟು, ಏನು ಮಾಡುತ್ತಿದ್ದೀರಿ? ನಿಮ್ಮ ಸರ್ಕಾರದ ಒಂದು ತಪ್ಪಿನಿಂದ ಯಾವ ರೈತರು ಬೀಜವನ್ನು ಬಿತ್ತನೆ ಮಾಡಬೇಕಾಗಿತ್ತು ನಾಟಿ ಕೆಲಸವು ಆಗದೇ $4^{1}/_{2}$ ಲಕ್ಷ ಎಕರೆಯಲ್ಲಿ ಬೆಳೆಯನ್ನು ಬೆಳೆಯಬೇಕಾದಂತಹ ರೈತರು ಬೀದಿ ಪಾಲಾಗುವಂತಹ ಸಂದರ್ಭ ಬಂದಿದೆ. ಮುಂದೆ ಆ ರೈತರ ಗತಿ ಏನು? ಈ ರೀತಿಯ ಸ್ಥಿತಿಗೆ ಅಲ್ಲಿಯ ರೈತರು ಬರಬೇಕಾದರೆ ನಿಮ್ಮ ಸರ್ಕಾರವೇ ಕಾರಣ. ನಾವು ಇವತ್ತು ಆಂದೋಲನವನ್ನು ಮಾಡಬೇಕೆಂದು ಇದ್ದೇವೆ. ಮಾನ್ಯ ಅಧ್ಯಕ್ಷರೆ, ತಾವು ಅವಕಾವವನ್ನು ಕೊಟ್ಟರೆ ಇದರ ಬಗ್ಗೆ ಪ್ರಸ್ತಾಪವನ್ನು ಮಾಡುತ್ತೇವೆ. ಬರೀ ಸರ್ಕಾರದವರು ಆಶ್ವಾಸನೆಯನ್ನು ಕೊಟ್ಟರೆ ಹೇಗೆ? ನಾವು ಇಲ್ಲಿ ಪ್ರಸ್ತಾಪವನ್ನು ಮಾಡುವುದು ಸರ್ಕಾರದವರು ನಾವು ಸಹಾನುಭೂತಿಯಿಂದ ಪರಿಶೀಲಿನೆಯನ್ನು ಮಾಡಿದ್ದೇವೆಂದು ಉದ್ಧಟತನದಿಂದ ಹೇಳುವಂತಹ ಉತ್ತರ ಬಂತು. ನಾನು ವಿರೋಧ ಪಕ್ಷದಲ್ಲಿದ್ದು ಅದರಲ್ಲಿಯೂ ವಿರೋಧ ಪಕ್ಷದ ನಾಯಕನಾಗಿ ಅಲ್ಲಿ

ನಡೆಯುತ್ತಿರುವಂತಹ ವಿಷಯವನ್ನು ಹೇಳಿದಾಗ, ಅದನ್ನು ಸೀರೀಯಸ್ ಆಗಿ ಸರ್ಕಾರದ ಅಧಿಕಾರಿಗಳು ತೆಗೆದುಕೊಳ್ಳದೇ ಕಾರ್ಯರೂಪಕ್ಕೆ ಬರದೇ ಇದ್ದಂತಹ ಪರಿಣಾಮವಾಗಿ ಸ್ಥಳ ಪರಿಶೀಲನೆಯನ್ನು ಮಾಡದೇ ಕ್ರಮವನ್ನು ತೆಗೆದುಕೊಳ್ಳದೇ ಇರುವಂತಹ ಪರಿಣಾಮವಾಗಿ ಇವತ್ತು 4 $^{1}/_{2}$ ಲಕ್ಷ ಎಕರೆ ಜಮೀನನಲ್ಲಿ ವ್ಯವಸಾಯವನ್ನು ಮಾಡತಕ್ಕಂತಹ ರೈತರು ಬೀದಿ ಪಾಲಗುತ್ತಿದ್ದಾರೆ. ವಿರೋಧ ಪಕ್ಷದ ನಾಯಕನಾಗಿ 21ನೇ ತಾರೀಖಿನಂದು ಹುಬ್ಬಳ್ಳಿಯಲ್ಲಿ ರೈತರ ಸಮಸ್ಯೆಯನ್ನು ತೆಗೆದುಕೊಂಡು ಒಂದು ಚಳುವಳಿಯನ್ನು ಮಾಡಬೇಕೆಂದಿದ್ದೇವೆ. ಈ ಜುರಾಲ ಅಣ್ಣೆಕಟ್ಟಿನ ಒಂದು ಎತ್ತರದಿಂದ ದುಸ್ಥಿತಿ ಏನಾಗಿದೆ ಎಂಬುದನ್ನು ಹೇಳಬೇಕಾಗಿದೆ. ಅದನ್ನು ಇವತ್ತು ಪ್ರಸ್ತಾಪವನ್ನು ಮಾಡುವುದಿಲ್ಲ ನಾಳೆ ಆ ವಿಷಯವನ್ನು ಪ್ರಸ್ತಾಪ ಮಾಡುತ್ತೇವೆ. ನಾನು ನಿಮ್ಮ ಮುಖಾಂತರವಾಗಿ ಸರ್ಕಾರಕ್ಕೆ ಎರಡು ಮೂರು ಪ್ರಸ್ತಾಪವನ್ನು ಮಾಡಬೇಕಾಗಿದೆ. ಅಷ್ಟೊಂದು ದೊಡ್ಡ ಅಚ್ಚುಕಟ್ಟಿನ ಪ್ರದೇಶದಲ್ಲಿ ಒಬ್ಬ ಖಾಯಂ ಚೀಫ್ ಇಂಜಿನಿಯರ್ ನೇಮಕ ಮಾಡಿ ಅಲ್ಲಿಯ ಕಾಮಗಾರಿಯ ಬಗ್ಗೆ ಗೊಂದಲವಾಗದಂತೆ ನೋಡಿಕೊಳ್ಳುತ್ತೀರಾ? ಎರಡನೆಯದಾಗಿ, ಸನ್ಮಾನ್ಯ ಅಧ್ಯಕ್ಷರೆ ಕೆ.ಸಿ.ರೆಡ್ಡಿಯವರು ವರದಿಯನ್ನು ಏನು ಕೊಟ್ಟಿದ್ದಾರೆ ಅದರ ಪ್ರಕಾರವಾಗಿ ಎಲ್ಲಿ ಎಲ್ಲಿ ರಿಪೇರಿಯಾಗಬೇಕಾಗಿದೆ ಅದರ ಬಗ್ಗೆ ನಿಮ್ಮ ಸರ್ಕಾರದ ಕಾರ್ಯಕ್ರಮಗಳೇನು? ಈಗ ತೆಗೆದುಕೊಂಡಿರುವಂತಹ ರಿಪೇರಿಯನ್ನು ಆದಷ್ಟು ಬೇಗ ಮುಗಿಸಿ ನೀವು ಕೊಟ್ಟಿರುವಂತಹ ಆಶ್ವಾಸನೆಯಂತೆ ಮುಗಿಸಲು ಸಾಧ್ಯವಿದೆಯೇ? ಅದನ್ನು ತಾವು ಮಾಡಲು ಸಿದ್ದವಿದ್ದೀರೋ? ರಾಜಕಾರಣಿಗಳು ಕಂಟ್ರಾಕ್ಟ್‌ದಾರರು ಮತ್ತು ಅಧಿಕಾರಿಗಳು ಶಾಮಿಲಾಗಿ ಅಲ್ಲಿ ಏನು ಲೂಟಿಯಾಗುತ್ತಿದೆ ಅದನ್ನು ತಡೆಗಟ್ಟಲು ತಾವು ಏನಾದರೂ ಕಾರ್ಯಕ್ರಮವನ್ನು ತೆಗೆದುಕೊಳ್ಳುತ್ತೀರಾ? ಇದಕ್ಕೆ ಸ್ಪಷ್ಟವಾದಂಥ ಉತ್ತರವನ್ನು ಸರ್ಕಾರದವರಿಂದ ತಮ್ಮ ಮೂಲಕ ಕೇಳುತ್ತಿದ್ದೇನೆ. ದಿನಾಂಕ 21ನೇ ತಾರೀಖಿನಂದು ಹುಬ್ಬಳ್ಳಿಯಲ್ಲಿ ಲಕ್ಷಾಂತರ ರೈತರನ್ನು ಸೇರಿಸಿ ಒಂದು ಪರಿಹಾರವನ್ನು ಹುಡುಕುವುದಕ್ಕೆ ಒಂದು ದೊಡ್ಡ ಆಂದೋಲವನ್ನು, ಹೋರಾಟವನ್ನು ಮಾಡುವಂತಹ ಇಚ್ಛೆಯನ್ನು ಪಟ್ಟಿದ್ದೇವೆ ಇಲ್ಲಿ ಸರ್ಕಾರದವರನ್ನು ನಿಮ್ಮ ಮುಖಾಂತರ ಪ್ರಸ್ತಾಪವನ್ನು ಮಾಡಿದಾಗ, ಅಲ್ಲಿ ನೀವು ನೀರನ್ನು ಬಿಡುವುದಕ್ಕೆ ತಯಾರಿಲ್ಲದಿದ್ದಾಗ ಇವತ್ತು ಅನಿವಾರ್ಯವಾಗಿ ಬೀದಿಗೆ ಇಳಿದು ಚಳುವಳಿಯನ್ನು ಮಾಡುವ ಪ್ರಸಂಗ ಬಂದಿದೆ. ಆದುದರಿಂದ ದಯವಿಟ್ಟು ರೈತರು ಬೀದಿಗೆ ಇಳಿದು ಹೋರಾಟವನ್ನು ಮಾಡಲು ಅವಕಾಶವನ್ನು ಮಾಡಿಕೊಡದೇ ಈಗಲಾದರೂ ಶೀಘ್ರವಾಗಿ ಕೆಲಸವನ್ನು ತೆಗೆದುಕೊಂಡು ಮುಗಿಸಿ ನೀರನ್ನು ಕೊಟ್ಟು, ಆ ರೈತರು ಬೆಳೆಯುವ ಬೆಳೆಗೆ ರಕ್ಷಣೆಯನ್ನು ಕೊಡುತ್ತೀರೋ ಎನ್ನುವ ಮಾತನ್ನು ತಮ್ಮ ಮುಖಾಂತರ ಸರ್ಕಾರವನ್ನು ಕೇಳುವದಕ್ಕೆ ಇಚ್ಚೆಯನ್ನು ಪಡುತ್ತೇನೆ.

+ ಶ್ರೀ ವಾಟಾಳ್ ನಾಗರಾಜ್:- ಮಾನ್ಯ ಅಧ್ಯಕ್ಷರೆ, ತಾವು ಶೂನ್ಯ ವೇಳೆಯ ಬಗ್ಗೆ ಮಾತನಾಡಿದ್ದು ನಿಜ. ನಾವು ಶೂನ್ಯವೇಳೆಯಲ್ಲಿ ಗಂಟೆಗಟ್ಟಲೆ ಮಾತನಾಡುತ್ತಿರುವುದು

ಸರಿಯಲ್ಲ ಎಂಬ ವಾದವನ್ನು ನಾನು ಒಪ್ಪುತ್ತೇನೆ. ಆದರೆ ನಾವು ಶೂನ್ಯ ವೇಳೆಯನ್ನು ನಾಳೆಯಿಂದ ತೆಗೆದುಹಾಕುತ್ತೇನೆಂದು ಹೇಳಿದ್ದನ್ನು ಮತ್ತೆ ಪುನರ್ ಪರಿಶೀಲನೆ ಮಾಡಬೇಕೆಂದು ತಮ್ಮಲ್ಲಿ ಮನವಿಯನ್ನು ಮಾಡಿಕೊಳ್ಳುತ್ತಿದ್ದೇನೆ. ಮೊದಲನೆಯದಾಗಿ ತುಂಗಾಭದ್ರ ಎಡ ದಂಡೆಯ ನಾಲೆಯ ಬಗ್ಗೆ ಮಾತನಾಡಿ, ಜುರಾಲ ಬಗ್ಗೆ ಹೇಳುತ್ತೇನೆ. ತುಂಗಾಭದ್ರ ಎಡ ದಂಡೆಯ ನಾಲೆಯ ಚಾನಲ್ ರಿಪೇರಿಯ ಕೆಲಸವನ್ನು ಮುಗಿಸಿ ನೀರನ್ನು ರೈತರಿಗೆ ಕೊಡಲಿಲ್ಲ ಎಂದರೆ, ಬರುವ ಆಗಸ್ಟ್ 1ನೇ ತಾರೀಖಿನಿಂದ. ಆ ತುಂಗಾಭದ್ರ ಜಲಾಶಯದ ಪಕ್ಕದಲ್ಲಿ ಬರತಕ್ಕಂತಹ ರೈತರ ಪರವಾಗಿ ವಿಧಾನಸೌಧದ ಮುಂದುಗಡೆಯಿಂದ ಚಳುವಳಿಯನ್ನು ಮಾಡುತ್ತೇನೆಂದು ಸರ್ಕಾರಕ್ಕೆ ಎಚ್ಚರಿಕೆಯನ್ನು ಕೊಡುತ್ತಿದ್ದೇನೆ. ಜುರಾಲ ಅಣೆಕಟ್ಟು ಬಗ್ಗೆ ತಮ್ಮ ಅನುಮತಿಯನ್ನು ಪಡೆದು ಮಾತನಾಡುತ್ತೇನೆ.

ಶ್ರೀ ಬಿ.ಎಸ್.ಯಡಿಯೂರಪ್ಪ:- ಜುರಾಲ ಅಣೆಕಟ್ಟು ಬಗ್ಗೆ ನಾಳೆ ದಿವಸ ತೆಗೆದುಕೊಳ್ಳೋಣವೆಂದು ಮಾನ್ಯ ನಾಗೇಗೌಡರು ಹೇಳಿದರು. ಅದಕ್ಕೆ ನಾಳೆ ತೆಗೆದುಕೊಳ್ಳಲಿ.

ಶ್ರೀ ವಾಟಾಳ್ ನಾಗರಾಜ್:- ಅವರುಗಳು ಏನು ಬೇಕಾದರೂ ಹೇಳಲಿ. ನಾನು ಹೇಳಬೇಕಲ್ಲ? ನಾನು ಇವತ್ತು ಹೇಳಿ ಬಿಡುತ್ತೇನೆ. ನಾಳೆ ಬೇಕಾದರೆ ಅವರುಗಳು ಹೇಳಲಿ.

ಅಧ್ಯಕ್ಷರು:- ವಿರೋಧ ಪಕ್ಷದವರೆಲ್ಲರಲ್ಲಿಯೂ ಒಗ್ಗಟ್ಟೆ ಇಲ್ಲವಲ್ಲ! ನಿಮ್ಮಲ್ಲಿ ಒಗ್ಗಟ್ಟು ಇರಬೇಕು.

ಶ್ರೀ ಬಿ.ಎಸ್.ಯಡಿಯೂರಪ್ಪ:- ನಮ್ಮಲ್ಲಿ ಒಗ್ಗಟ್ಟು ಇದೆ. ಆದರೆ ಶ್ರೀ ವಾಟಾಳ್ ನಾಗರಾಜ್‌ರವರು ಮಾತ್ರ ಒಂಟಿಯ ಸಲಗ ಇದ್ದ ಹಾಗೆ ಅವರಿಗೆ ಅವರದೇ ಆದಂತಹ ನೀತಿ ಇದೆ.

ಶ್ರೀ ವಾಟಾಳ ನಾಗರಾಜ್:- ಶ್ರೀ ಬಿ.ಎಸ್.ಯಡಿಯೂರಪ್ಪನವರು ನನ್ನನ್ನು ಒಂಟಿ ಸಲಗ ಎಂದು ಹೇಳಿದ್ದಾರೆ ಅದನ್ನು ನಾನು ಸ್ವಾಗತ ಮಾಡುತ್ತೇನೆ. ಒಂಟಿ ಸಲಗ ಇಡೀ ಅರಣ್ಯದಲ್ಲಿ ನಿರ್ಭಯವಾಗಿ ಹೇಗೆ ಓಡಾಡುತ್ತದೆ, ಅದು ಏನು ಹುಡುಗಾಟವಲ್ಲ. ಅದು ಬಹಳ ಪ್ರಾಮುಖ್ಯವಾದುದು.

ಶ್ರೀ ಎಂ.ಪಿ.ಪ್ರಕಾಶ್:- ಒಂಟಿ ಸಲಗ ಎಂದರೆ ಕಾಡಿನಲ್ಲಿ ಮಾತ್ರ ಆದರೆ ಇಲ್ಲಿ ನಮಗೆ ಸಹಕಾರವನ್ನು ಕೊಡುತ್ತಾರೆ ಎಂಬ ಅರ್ಥದಲ್ಲಿ ಹೇಳಿದ್ದಾರೆ.

ಶ್ರೀ ಕೆ.ಎನ್.ನಾಗೇಗೌಡ:- ಜುರಾಲ ಅಣೆಕಟ್ಟಿನ ಬಗ್ಗೆ ನಾಳೆ ಪ್ರಸ್ತಾಪ ಮಾಡಲಿ ಅದಕ್ಕೆ ತಾವು ನಾಳೆ ಅವಕಾಶವನ್ನು ಮಾಡಿಕೊಡಿ. ಅಧ್ಯಕ್ಷರ ಅಪ್ಪಣೆಯನ್ನು ಪಡೆದು ಮೊದಲು ವಾಟಾಳ್‌ನಾಗರಾಜ್‌ರವರೇ ಪ್ರಸ್ತಾಪ ಮಾಡಲಿ.

ಶ್ರೀ ಬಿ.ಎಸ್.ಯಡಿಯೂರಪ್ಪ:- ಮಾನ್ಯ ಅಧ್ಯಕ್ಷರು ಸಹ ನಾಳೆ ಜುರಾಲ ಬಗ್ಗೆ ಪ್ರಸ್ತಾಪ ಮಾಡುವುದಕ್ಕೆ ಒಪ್ಪಿಕೊಂಡಿದ್ದಾರೆ ಆದುದರಿಂದ ನಾಳೆ ಮಾತನಾಡಿ. ನಿಮಗೂ ಒಳ್ಳೆಯ ಹೆಸರು ಬರುತ್ತದೆ.

ಶ್ರೀ ವಾಟಾಳ್ ನಾಗರಾಜ್:- ಇವತ್ತೆ ಅವಕಾಶವನ್ನು ಕೊಟ್ಟರೆ ಮಾತನಾಡುತ್ತೇನೆ ಇಲ್ಲ ನಾಳೆಯೇ ಮಾತನಾಡೋಣವೆಂದರೆ ಅದಕ್ಕೂ ಸಹ ತಮಗೆ ಧನ್ಯವಾದಗಳನ್ನು ಸಲ್ಲಿಸುತ್ತೇನೆ.

2.40 ಪಿ.ಎಂ

ಶ್ರೀ ಟಿ.ಬಿ.ಜಯಚಂದ್ರ:- ಅವರು ಆ ಭಾಗದಿಂದ ಬಂದಿರತಕ್ಕವರು ಇಂಥ ಪ್ರಮುಖವಾದ ವಿಷಯ ಪ್ರಸ್ತಾಪವಾದಾಗ ಅವರು ಧ್ವನಿಗೂಡಿಸದಿದ್ದರೆ ತಪ್ಪಾಗುತ್ತದೆ. ಆದ್ದರಿಂದ ಅವರಿಗೆ ಎರಡು ನಿಮಿಷ ಅವಕಾಶ ಕೊಡಿ.

ಅಧ್ಯಕ್ಷರು:- ವಿಷಯ ಪ್ರಮುಖವಾದದ್ದು, ಅವರು ಆ ಭಾಗದವರು ಎರಡೂ ಸತ್ಯ. ಆದರೆ ನನ್ನ ಪರಿಸ್ಥಿತಿ ನೋಡಿ, ಎಲ್ಲಿಂದ ಎಲ್ಲಿಗೆ ಬಂದಿದೆ ಈ ಶೂನ್ಯವೇಳೆ?

+ ಶ್ರೀ ಶ್ರೀರಂಗದೇವರಾಯಲು:- ಮಾನ್ಯ ಅಧ್ಯಕ್ಷರೇ, ಮಾರ್ಚ್ 31ಕ್ಕೆ ನಡೆದ ಐಸಿಸಿ ಮೀಟಿಂಗ್‌ನಲ್ಲಿ ನಾವು ಭಾಗವಹಿಸಿದ್ದೆವು. ಆ ಮೀಟಿಂಗ್‌ನಲ್ಲಿ ಟೆಂಡರ್ ಕಾಲ್ ಫಾರ್ ಮಾಡಬೇಕೆಂದು ತೀರ್ಮಾನವಾಯಿತು. ಗೊತ್ತಾದ ಅವಧಿಯಲ್ಲಿ ಯಾರೂ ಟೆಂಡರ್ ಕಾಲ್ ಫಾರ್ ಮಾಡಲಿಲ್ಲ. ಆ ಪರಿಸ್ಥಿತಿಯಲ್ಲಿ ನಾವು ಎಲ್ಲ ಶಾಸಕರು ಹೋಗಿ ಆಗಿನ ಮುಖ್ಯ ಮಂತ್ರಿಗಳಾದ ಶ್ರೀ ದೇವೇಗೌಡರ ಹತ್ತಿರ ಏಪ್ರಿಲ್ 15ರೊಳಗೆ ನೀರು ಕೊಡಿ ಎಂದು ಒತ್ತಾಯ ಮಾಡಿ ನೀರು ತೆಗೆದುಕೊಳ್ಳುವುದಕ್ಕೆ ಪ್ರಯತ್ನ ಮಾಡಿದೆವು. ಏಪ್ರಿಲ್ 15ಕ್ಕೆ ನೀರುಕೊಟ್ಟರು. ಏಪ್ರಿಲ್ 20ಕ್ಕೆ ಕೆಲಸ ಪ್ರಾರಂಭ ಮಾಡಬೇಕಾಗಿತ್ತು. ನಮ್ಮನಾಯಕರು ಹೇಳಿದ ಪ್ರಕಾರ 5-10 ಜನರಿಗಿಂತ ಜಾಸ್ತಿ ಕಾಂಟ್ರಾಕ್ಟ್ ಕೊಡಬಾರದು. ಆದರೆ ದುರ್ದೈವಶಾತ್ ಸಾಕಷ್ಟು ಜನರಿಗೆ ಕಾಂಟ್ರಾಕ್ಟ್ ಕೊಟ್ಟರು. ಕಾಂಟ್ರಾಕ್ಟ್ ಕೊಟ್ಟಮೇಲೆ ಮಾನ್ಯ ಮಂತ್ರಿಗಳು ಹೇಳುತ್ತಿರುವುದು ಎರಡು, ಒಂದು ಮಳೆ ಬಂದಿದೆ, ಎರಡನೆಯದು ಗಂಗಾವತಿ ಶಾಸಕರು ಎಲೆಕ್ಷನ್ ಕಮಿಷನ್ ಹತ್ತಿರ ಹೋಗಿದ್ದಾರೆಂದು ಅಪ್ಪರ್ ಹೌಸ್‌ನಲ್ಲಿ ಹೇಳಿದ್ದಾರೆ. ಆದರೆ ಎಲೆಕ್ಷನ್ ಕಮಿಷನ್ ಪರ್ಮಿಷನ್ ಕೊಟ್ಟದ್ದು ಏಪ್ರಿಲ್ 16ಕ್ಕೆ. ಏಪ್ರಿಲ್ 16ಕ್ಕೆ ಕೆಲಸಪ್ರಾಂಭ ಮಾಡಬಹುದೆಂದು ಪರ್ಮಿಷನ್ ಕೊಟ್ಟಿದ್ದಾರೆ ಏಪ್ರಿಲ್ 16ಕ್ಕೆ ಕೆಲಸ ಪ್ರಾರಂಭ ಮಾಡಿದರೆ 75 ದಿನಕ್ಕೆ ಕೆಲಸ ಮುಗಿಸಬೇಕಾಗಿತ್ತು. ಮಳೆ ಬಂದಾದಮೇಲೆ ಒಂದು ವಾರ ತಡವಾಗಿರಬಹುದು. ಆದರೆ ಇವತ್ತು 91 ದಿನವಾದರೂ ಕೆಲಸ ಮುಗಿದಿಲ್ಲ. ಇದಕ್ಕೆ ಕಾರಣವಾದರೂ ಇಷ್ಟೆ ಬೇಗ ಹಣ ಬಿಡುಗಡೆ ಮಾಡದೆ ತಡವಾಗಿದೆ. ನಾನು 2-3 ದಿನಕ್ಕೊಮ್ಮೆ ಅಲ್ಲಿ ಹೊಗುತ್ತಿದ್ದೆ. ಸಾಕಷ್ಟು ಕಂಟ್ರಾಕ್ಟರ್ಸ್ ಬಿಟ್ಟು ಹೋಗಿದ್ದಾರೆ. ಕೆಲವು ಅಧಿಕಾರಿಗಳು ಲೇಬರರ್ಸ್ ಕರೆದುಕೊಂಡು ಬಂದು ಕೆಲಸ ಮಾಡಿಸತಕ್ಕ ಪರಿಸ್ಥಿತಿ

ಬಂದಿದೆ. ನನ್ನ ಕ್ಷೇತ್ರದ 8 ಹಳ್ಳಿಗಳು ಆ ಕೆನಾಲ್ ಬದಿಯಲ್ಲಿವೆ. ಯಾವ ಟೈಂನಲ್ಲಿ ಕೆನಾಲ್ ಒಡೆದು 8 ಹಳ್ಳಿಗಳು ಹಾಳಾಗುತ್ತವೋ ಎಂಬ ಹೆದರಿಕೆ ಬಂದಿದೆ. ನಾನು ಸಾಕಷ್ಟು ಸಲ ಅಲ್ಲಿ ಹೋಗಿದ್ದೇನೆ. ಶ್ರೀ ಎಂ.ಎಸ್.ಪಾಟೀಲ್ ಅವರನ್ನು ಸಂಗಡ ಕರೆದುಕೊಂಡು ಹೋಗಿದ್ದೆ. ಮುಖ್ಯವಾಗಿ, ಅಲ್ಲಿ ಸಿದ್ನಾಳ್ ಎಂಬ ಹತ್ತು ಸಾವಿರ ಜನಸಂಖ್ಯೆ ಇರತಕ್ಕ ಹಳ್ಳಿ ಇದೆ. ಅದರ ಬದಿಯಲ್ಲಿ ಕಾಲುವೆ ಹೋಗುತ್ತದೆ. ಅಲ್ಲಿ ಸುಮಾರು ಹತ್ತು ಸಾವಿರ ಜನರು ವಾಸ ಮಾಡುತ್ತಿದ್ದಾರೆ. ಅಂಥದ್ದು 7 ಹಳ್ಳಿಗಳು ಬರುತ್ತವೆ. ಕೆನಾಲ್ ತೆಗೆಯುವುದು ಸುಲಭ, ಆದರೆ ಕಟ್ಟುವುದು ಕಷ್ಟ. ನಾವು ಮೊನ್ನೆ ಹೋದಾಗ ಮಣ್ಣು ಅಗಿದು ಕೆನಾಲ್ ಸ್ಟೆಂತನ್ ಮಾಡುತ್ತಿದ್ದರು. 75 ದಿನಗಳಲ್ಲಿ ಕೆನಾಲ್ ಸ್ಟೆಂತನ್ ಕೆಲಸ ಮಾಡಬೇಕಾಗಿರುವುದನ್ನು ಕೇವಲ ಒಂದು ತಿಂಗಳಲ್ಲಿ ಮಾಡುತ್ತೇವೆಂದರೆ ಸಾಧ್ಯವೇ? ನನಗೆ ಸ್ಟೆಂತನ್ ಬಗ್ಗೆ ಸಾಕಷ್ಟು ಅನುಭವ ಇದೆ. ಕ್ವಾಲಿಟಿ ಕಂಟ್ರೋಲು ಸಾಕಷ್ಟು ಕಡೆ ಕಂಟ್ರೋಲ್ ಟೆಸ್ಟ್ ಮಾಡಬೇಕಾಗಿದೆ. ಹಿಂದೆ ಮಾನ್ಯ ದೇವೇಗೌಡರು ಇರಿಗೇಷನ್ ಮಿನಿಷ್ಟರ್ ಆಗಿದ್ದಾಗ ಕ್ವಾಲಿಟಿ ಕಂಟ್ರೋಲ್ ಟೆಸ್ಟ್ ಮಾಡುತ್ತಿರಬೇಕಾದರೆ ನಾವು ಸಾಕಷ್ಟು ಅವರ ಸಂಗಡ ನೋಡಿದ್ದೇವೆ. ಈಗ ಕ್ವಾಲಿಟಿ ಕಂಟ್ರೋಲರ್ ಇಲ್ಲವೇ ಇಲ್ಲ. ನಾನು ಕಾರ್ಯದರ್ಶಿಯವರ ಸಂಗಡ ಮಾತನಾಡಿದ್ದೇನೆ. ಕೆಲಸ ಸರಿಯಾಗಿ ಆಗುತ್ತಿಲ್ಲ. ದಯವಿಟ್ಟು ಕೆಲಸವನ್ನು ಬೇಗ ಮಾಡಿಸಿ. ಊರಿನ ಬದಿಯಲ್ಲಿ ಕಾಲುವೆ ಒಡೆದರೆ 7 ಹಳ್ಳಿಗಳು 10- 15 ಸಾವಿರ ಜನಸಂಖ್ಯೆ ಸಾವಾದರೆ ಇದಕ್ಕೆ ಸರ್ಕಾರವೇ ಹೊಣೆ ಆಗುತ್ತದೆ. ಆದ್ದರಿಂದ ದಯವಿಟ್ಟು ಕ್ವಾಲಿಟಿ ಚೆನ್ನಾಗಿ ಮಾಡಿ ಎಂದು ಹೇಳುತ್ತೇನೆ. ನಾನು ಸಾಕಷ್ಟು ಸಲ ಗಮನಿಸಿದ್ದೇನೆ. ಅದಕ್ಕೋಸ್ಕರ ನಾನು ಮಾನ್ಯ ಮಂತ್ರಿಗಳು ಹೇಳಿದ್ದನ್ನು ಒಪ್ಪುತ್ತಿಲ್ಲ. ಅವರು ಹೇಳುತ್ತಿರುವುದು ಎಲೆಕ್ಷನ್ ಕಮಿಷನ್ ಕಡೆಯಿಂದ ಸ್ಟೇ ಸಿಕ್ಕಿದೆ. ಆದರೆ ಅವರಿಗೆ ಸ್ಟೇ ವೆಕೇಟ್ ಆಗಿದ್ದು ಏಪ್ರಿಲ್ 16ಕ್ಕೆ ಮಳೆ ಬಂದಿದೆ ಎಂದು ಹೇಳುತ್ತಾರೆ. ಹಿಂದೆ ಒಂದುವಾರ ಮಳೆ ಬಂದದ್ದು ಈಗ ಮಳೆ ನಿಂತಿದೆ. ಶ್ರೀ ಎಡಿಯೂರಪ್ಪನವರು ಬಂದಾಗ ಮಳೆ ಬಂದಿತ್ತು. ಆಗ ಕೆಲಸ ನಿಂತಿತ್ತು 90 ದಿನಗಳಲ್ಲಿ ಒಂದುವಾರ ಕೆಲಸ ನಿಂತರೆ ಏನು ತೊಂದರೆಯಾಗುವುದಿಲ್ಲ. ಇದಕ್ಕೆಲ್ಲ ಕಾರಣ ಫೈನಾನ್ಸ್. ನಮ್ಮಲ್ಲಿ ಬಹುತೇಕ ಆಂಧ್ರಕ್ಕೆ ನೀರು ಬಿಡುತ್ತಾರೆಂದು ಶ್ರೀ ವಾಟಾಳ್ ನಾಗರಾಜ್ ಅವರು ಹೇಳುತ್ತಿದ್ದರು. ನಾನು ಏನು ಇಲ್ಲಿ ಹೇಳಬಯಸುತ್ತೇನೆಂದರೆ ನಮ್ಮ ನದಿಗೆ ಎಷ್ಟೇ ನೀರು ಕಡಿಮೆಯಾದರೂ ಕೆನಾಲ್‌ಗೆ ಫೀಡ್ ಆಗಿ ಎಕ್ಸಸ್ ವಾಟರ್ ನದಿಗೆ ಹೋಗುತ್ತಿದೆ. ಹಾಗಾಗಿ ಹತ್ತು ಸಾವಿರ ಎಕರೆ ನಮ್ಮಲ್ಲಿ ಡೈರೆಕ್ಟ್ ಇರಿಗೇಟ್ ಆಗುತ್ತಾ ಇರತಕ್ಕ ಕೆನಾಲ್‌ಗಳು ಇವೆ ಅವಕ್ಕೆ ರಿಪೇರಿ ಇಲ್ಲ, ಮೇಂಟೆನನ್ಸ್ ಇಲ್ಲ. ಹಾಗಾಗಿ ನೀರು ಹರಿಯುವುದು ಬಹಳ ಕಷ್ಟವಾಗಿದೆ. ನಾನು ಇರಿಗೇಷನ್ ಸೆಕ್ರೆಟರಿಯವರನ್ನು ಕರೆದುಕೊಂಡು ಹೋಗಿದ್ದೆ. ಮುಖ್ಯವಾಗಿ ಈಗಿನ ಪ್ರಧಾನಿಯವರು ಬಂದು ನೋಡಿಕೊಂಡು ಹೋಗಿದ್ದರು. ಅದನ್ನು ಮಾಡಿಸಿಕೊಡುತ್ತೇನೆಂದು ಹೇಳಿದ್ದರು. ಅದನ್ನು ಕೂಡ ಈಗ ಮಾಡಬೇಕಾಗಿದೆ. ಈ ಸಂದರ್ಭದಲ್ಲಿ ಇನ್ನೊಂದು ತಮಗೆ ಹೇಳುತ್ತಿದ್ದೇನೆ ಇವರು ಇರಿಗೇಷನ್ ಡಿಪಾರ್ಟ್‌ಮೆಂಟಿಗೆ ಒಂದು ಕಿಲೋಮೀಟರ್

ಮೇಂಟೆನೆನ್ಸ್ ಮಾಡಬೇಕಾದರೆ ಒಂದು ಸಾವಿರ ರೂಪಾಯಿ ಕೊಡುತ್ತಾರೆ. ಆದರಿಂದ ಬರಿ ಗ್ಯಾಂಗ್‌ಮೆನ್‌ಗೆ ಸ್ಯಾಲರಿ ಕೊಡುವುದು ಕಷ್ಟವಾಗುತ್ತದೆ. ಇಂಥದ್ದನ್ನು ತಮ್ಮ ಗಮನಕ್ಕೆ ತರುತ್ತಿದ್ದೇನೆ ದಯಮಾಡಿ, ಕ್ವಾಲಿಟಿ ಚೆನ್ನಾಗಿ ಆಗಬೇಕು. ನನ್ನ ಎಲ್ಲ ಹಳ್ಳಿಗಳು ಆ ಕೆನಾಲ್ ಅಡಿಯಲ್ಲಿ ಬರುತ್ತವೆ. ಒಂದು ವೇಳೆ ಕೆನಾಲ್‌ಗೆ ಏನಾದರೂ ಆದರೆ ಆಗ ಅಲ್ಲಿರುವ ಹಳ್ಳಿಯ ರೈತರ ಜವಾಬ್ದಾರಿ ನಮ್ಮೆಲ್ಲರ ಮೇಲಿದೆ. ಮುಖ್ಯವಾಗಿ ಸಿದ್ಲಾಳ್‌ನಲ್ಲಿ ಹತ್ತು ಸಾವಿರ ಜನಸಂಖ್ಯೆ ಇದೆ. ಆ ಹಳ್ಳಿಯಲ್ಲಿ ಏನಾದರೂ ಅನಾಹುತವಾದರೆ ಹತ್ತು ಸಾವಿರ ಜನರ ಪ್ರಾಣ ನಮ್ಮ ಕೈಯಲ್ಲಿದೆ. ಇಂಥದ್ದು 7 ಹಳ್ಳಿಗಳು ಬರುತ್ತವೆ. ನಾನು 2-3 ಸಾರಿ ಮಂತ್ರಿಗಳಿಗೆ ತಿಳಿಸಿದ್ದೆ. ಬನ್ನಿ ಕೆನಾಲ್‌ಗೆ ಹೋಗೋಣ ಎಂದು ಹೇಳಿದ್ದೆ. ಅವರು ಬರುತ್ತೇನೆಂದು ಹೇಳಿದ್ದರು. ಆದರೆ ಏಕೋ ಬರಲಿಲ್ಲ. ನಾನು ಅವರಿಗೆ ಆಕ್ಷೇಪ ಮಾಡಿ ಹೇಳುತ್ತಿಲ್ಲ. ಕ್ವಾಲಿಟಿ ಚೆನ್ನಾಗಿ ಆಗಬೇಕು, ಬೇಗ ನೀರು ಬಿಡಬೇಕು ಎಂದು ಹೇಳುತ್ತಿದ್ದೇನೆ. ಮಾನ್ಯ ಖರ್ಗೆಯವರು, ಎಡಿಯೂರಪ್ಪನವರು ಹೇಳಿದ ಪ್ರಕಾರ ಎಲ್ಲೆಲ್ಲಿ ನೀರು ಇದೆ. ನೀರು ಬಂದತಕ್ಷಣ ಹಚ್ಚಬೇಕು ಎಂದು ಅಲ್ಲೇಲ್ಲ ಸಸಿ ಮಾಡಿ ಹಾಕಿದ್ದಾರೆ. ಆದರೆ ಇಲ್ಲಿಯವರೆಗೆ ನೀರು ಬಿಡಲಿಲ್ಲ. ನಾವು 21 ದಿನದಿಂದ ಒಂದು ತಿಂಗಳೊಳಗೆ ಸಸಿ ನಾಟಿ ಮಾಡುತ್ತೇವೆ. ಈಗಾಗಲೇ ಒಂದು ತಿಂಗಳು ಆಗುತ್ತಾ ಬಂದಿದೆ. ಆ ಸಸಿಯನ್ನು ನಾವು ಏನೂ ಮಾಡುವುದಕ್ಕಾಗುತ್ತಿಲ್ಲ. ರೈತರಿಗೆ ಲೆಫ್ಟ್ ಬ್ಯಾಂಕ್ ಕೆನಾಲ್‌ನಿಂದ ಎಷ್ಟು ಲಾಸ್ ಆಗುತ್ತಿದೆ ಎಂದರೆ ಕರೆಂಟ್ ಇಲ್ಲದೆ ಲಿಫ್ಟ್ ಇರಿಗೇಷನ್‌ನಲ್ಲಿ ಲಾಸ್ ಆಗುತ್ತಿದೆ. ನನ್ನ ಹತ್ತಿರ ರಿಪೋರ್ಟ್ ಇದೆ. ಸುಮಾರು 60-70 ಪರ್ಸೆಂಟ್ ಲಿಫ್ಟ್ ಇರಿಗೇಷನ್‌ನಿಂದ ಪಂಪುಸೆಟ್ಟುಗಳಿಗೆ ಕರೆಂಟು ಇಲ್ಲದೆ ಲಾಸ್ ಆಗಿದೆ. ಹೀಗಾಗಿ ಇಲ್ಲಿ ಲೆಫ್ಟ್ ಬ್ಯಾಂಕ್ ಕೆನಾಲ್ ನೀರಿನಂದ ಲಾಸ್ ಆಗುತ್ತಿದೆ. ನಮ್ಮ ರಾಯಚೂರು ಜಿಲ್ಲೆಯ ರೈತರ ಪರಿಸ್ಥಿತಿ ಏನಾಗಿದೆ ಎಂದರೆ ಹೇಳುವುದಕ್ಕೆ ಸಾಧ್ಯವಿಲ್ಲ. ಒಂದು ಕಡೆ ಕಬ್ಬು ಕಾರ್ಖಾನೆಗೆ ಸರಬರಾಜು ಮಾಡಿದ್ದು ಇನ್ನೂ ರೊಕ್ಕ ಬಂದಿಲ್ಲ. ನಮ್ಮ ರೈತರ ಪರಿಸ್ಥಿತಿ ಹೀಗಾಗಿದೆ. ನಾನು ಜಿಲ್ಲಾಧಿಕಾರಿಗಳಿಗೆ ಹೇಳಿಬಂದಿದ್ದೇನೆ. ರೈತರ ಮನೆಯಲ್ಲಿ ಜಪ್ತಿ ಮಾಡುತ್ತಿದ್ದಾರೆ. ಇದನ್ನು ನಾನು ಖಂಡಿಸುತ್ತಿದ್ದೇನೆ. ತಾವು ದಯಮಾಡಿ ಬೇಗ ಕೆಲಸ ಮಾಡಿಸಿ, ಕ್ವಾಲಿಟಿ ಚೆನ್ನಾಗಿ ಮಾಡಿ ನೀರು ಕೊಡುವುದಕ್ಕೆ ಅವಕಾಶ ಮಾಡಿಕೊಡಬೇಕೆಂದು ತಮ್ಮ ಮೂಲಕ ಮಾನ್ಯ ಮಂತ್ರಿಗಳಿಗೆ ಒತ್ತಾಯ ಮಾಡುತ್ತಾ, ನನಗೆ ಮಾತನಾಡಲು ಅವಕಾಶ ಕೊಟ್ಟ ತಮಗೆ ಧನ್ಯವಾದಗಳನ್ನರ್ಪಿಸಿ ನನ್ನ ಮಾತು ಮುಗಿಸುತ್ತೇನೆ.

+ ಶ್ರೀ ಕೆ.ಎನ್.ನಾಗೇಗೌಡ (ನೀರಾವರ ಸಚಿವರು):- ಮಾನ್ಯ ಅಧ್ಯಕ್ಷರೆ, ಮಾನ್ಯ ವಿರೋಧ ಪಕ್ಷದ ನಾಯಕರು, ಖರ್ಗೆಯವರು, ವಾಟಾಳ್ ನಾಗರಾಜ್ ಅವರು, ಶ್ರೀರಂಗದೇವರಾಯಲು ಅವರು ಎತ್ತಿರತಕ್ಕ ವಿಚಾರ ಬಹಳ ಪ್ರಾಮುಖ್ಯವಾದುದು. ಅದರಲ್ಲಿ ಎರಡನೆಯ ಮಾತಿಲ್ಲ. ಲಕ್ಷಾಂತರ ಜನ ರೈತರ ಭವಿಷ್ಯ ಇದರಲ್ಲಿ ಅಡಗಿದೆ ಎಂಬುದನ್ನು ಸರ್ಕಾರ ಮನಗಂಡು ಎರಡು ತಿಂಗಳುಗಳಿಂದ ಕೆಲವು ಕಾರ್ಯಕ್ರಮ ತೆಗೆದುಕೊಂಡದ್ದನ್ನು ಸದನದ ಗಮನಕ್ಕೆ ತರುವುದು ಸೂಕ್ತ ಎಂದುಕೊಂಡಿದ್ದೇನೆ.

ಪ್ರಾರಂಭದಲ್ಲಿ ಒಂದು ಮಾತು ಹೇಳುವುದು ಅವಶ್ಯಕವೆಂದು ಅಂದುಕೊಂಡಿದ್ದೇನೆ. ಅದೇನೆಂದರೆ, ನಾನು ಸ್ಥಳ ನೋಡುವುದಕ್ಕೆ ಆಗಲಿಲ್ಲ. ನಾವು ಇಲ್ಲಿ ಬಂದು ಬಂದು ತಿಂಗಳು ಹತ್ತು ದಿನ ಅಂದರೆ 40 ದಿವಸವಾಯಿತು. ಆ ಭಾಗಕ್ಕೆ ಹೋಗಬೇಕೆಂದು 4ನೇ ತಾರೀಖು ದಾವಣಗೆರೆಗೆ ಹೋಗಿ ಸೆಷನ್ ಇದ್ದುದರಿಂದ ವಾಪಸ್ಸು ಬರಬೇಕಾಯಿತು. ಸಮಯ ಇಲ್ಲದೆ ಇದ್ದುದರಿಂದ ನೋಡಲಿಲ್ಲ. ಆ ವಿಚಾರದಲ್ಲಿ ನಾವು ಪ್ರತಿನಿತ್ಯ ಅಧಿಕಾರಿಗಳ ಜೊತೆ ಚರ್ಚೆ ಮಾಡಿದ್ದೇನೆ. ಸೆಕ್ರೆಟರಿ, ಚೀಫ್ ಇಂಜಿನಿಯರ್ ಹಾಗು ಇಂಜಿನಿಯರ್ ಇನ್ ಚೀಫ ಜೊತೆಯಲ್ಲಿ ಚರ್ಚೆ ಮಾಡಿದ್ದೇನೆ. ಸುದೀರ್ಘವಾಗಿ ಈ ಕಾರ್ಯಕ್ರಮದ ಬಗ್ಗೆ ನಮ್ಮ ಐಸಿಸಿ ಮೀಟಿಂಗ್‌ನಲ್ಲಿ ಚರ್ಚೆ ಮಾಡಿದ್ದೇವೆ. ಇವತ್ತು ಬೆಳಿಗ್ಗೆ ಜಿಲ್ಲಾಧಿಕಾರಿಗಳ ಜೊತೆ ಟೆಲಿಫೋನ್‌ನಲ್ಲಿ ಆ ಪರಿಸ್ಥಿತಿಯನ್ನು ಚರ್ಚೆ ಮಾಡತಕ್ಕ ಪ್ರಯತ್ನ ಮಾಡಿದ್ದೇವೆ. ಅರ್ಥ ಏನೆಂದರೆ ತುಂಬಾ ಸೀರಿಯಸ್ ಆಗಿ ಆಗಬೇಕೆಂಬುದರಲ್ಲಿ ಎರಡನೆಯ ಮಾತಿಲ್ಲ. ಇಷ್ಟು ತಡವಾದರೂ ಸರಿಯಾದುದು ಇಲ್ಲವೆಂಬುದು ನನ್ನ ವೈಯಕ್ತಿಕ ಅಭಿಪ್ರಾಯ. ಅದಕ್ಕೆ ಕಾರಣ ಏನು ಎಂದು 2-3ನ್ನು ಸೂಕ್ಷ್ಮವಾಗಿ ಹೇಳಿದರೆ ತಾವು ಒಪ್ಪಿಕೊಳ್ಳುತ್ತೀರೆಂದು ನನಗೆನ್ನಿಸುತ್ತಿದೆ. 1995ರ ಮೇ ತಿಂಗಳಲ್ಲಿ ಶ್ರೀ ಕೆ.ಸಿ.ರೆಡ್ಡಿಯವರ ವರದಿ ಬಂದಮೇಲೆ 19 ಕೋಟಿ 26 ಲಕ್ಷಕ್ಕೆ ಎಸ್ಟಿಮೇಟ್ ಆಯಿತು. ಸುಮಾರು 964 ಚೈನ್ಸ್ ಅಂದರೆ 29 ಕಿಲೋಮೀಟರ್ ರಿಪೇರಿ ಆಗಬೇಕೆಂದು 227 ಕಿಲೋಮೀಟರ್ ಲೆಂಗ್ತ ಇರತಕ್ಕ ಕೆನಾಲ್‌ಗೆ 29 ಕಿಲೋಮೀಟರ್ ರಿಪೇರಿ ಮಾಡಬೇಕೆಂದು ಶ್ರೀ ಕೆ.ಸಿ.ರೆಡ್ಡಿಯವರ ವರದಿಯ ಆಧಾರದ ಮೇಲೆ 19 ಕೋಟಿ 26ಲಕ್ಷ ರೂಪಾಯಿನ ಎಸ್ಟಿಮೇಟ್ ಮಾಡಿದೆವು. ಉದ್ದೇಶ ಹಾಗೆ ಮಾಡಬೇಕೆಂದರೆ, 1995ರಲ್ಲಿ ಎರಡು ತಿಂಗಳು ಕ್ಲೋಸರ್, 1996ರಲ್ಲಿ 2 ತಿಂಗಳು ಕ್ಲೋಸರ್ ಮಾಡಬೇಕು, 4 ತಿಂಗಳ ಕಾಲ ಮಾಡಬೇಕೆಂದು ಪ್ರಾರಂಭದಲ್ಲಿ ತೀರ್ಮಾನ ತೆಗೆದುಕೊಂಡರು. 1995ರ ಏಪ್ರಿಲ್‌ನಲ್ಲಿ ಕ್ಲೋಸರ್ ಪೀರಿಯಡ್ ಮಾಡುವುದಕ್ಕಾಗಲಿಲ್ಲ. ಅದಕ್ಕೆ ಶ್ರೀರಂಗದೇವರಾಯಲು ಉತ್ತರ ಹೇಳಿದರು. ಅಂದಿನ ಮುಖ್ಯ ಮಂತ್ರಿಗಳ ಹತ್ತಿರ ಬಂದು ನೀರು ಬಿಡಬೇಕೆಂದು ಕೇಳಿದ್ದರಿಂದ ಏಪ್ರಿಲ್ ಮೊದಲನೇ ವಾರ ಮೊದಲನೇ ಕ್ಲೋಸರ್ ಮಾಡಬೇಕಾದುದು 20 ದಿನ ಮುಂದೆ ಹೋಯಿತು. ಆ 20 ದಿವಸ ಮುಂದೆ ಹೋದ್ರಮೇಲೆ ತದನಂತರ ತಮಗೆ ಗೊತ್ತು ಕೋರ್ಟಿಗೆ ಹೋದರು 75 ದಿವಸಕ್ಕೆ ಮುಗಿಯಬೇಕು ಅಂತ ಕೋರ್ಟ್ ಡೈರೆಕ್ಷನ್ ಕೊಟ್ಟಿತ್ತು. ಹೋದವರ್ಷ ಕೆಲಸಾನೇ ಮಾಡಲಿಲ್ಲ. ಈಗ 1996 ಏಪ್ರಿಲ್‌ನಲ್ಲಿ ನಾವು ಕೆಲಸ ತೆಗೆದುಕೊಂಡೆವು. ಅದರಲ್ಲಿ ಎರಡು ಮೂರು ಕಾರಣ. ತಾವು ಮತ್ತು ಶ್ರೀರಂಗದೇವರಾಯಲು ಅವರು ಹೇಳಿದಹಾಗೆ ಹಣದ ಕಾರಣ, ಹಣದ ಕೊರತೆ ಇತ್ತು. ಒಂದೂವರೆ ಕೋಟಿ ರೂಪಾಯಿ ಮಾತ್ರ ಬಿಡುಗಡೆ ಮಾಡಿದ್ದರು. ತಾವು ನನಗೆ ಕಾಗದ ಬರೆದಮೇಲೆ ಪರಿಸ್ಥಿತಿಯನ್ನು ಅರ್ಥ ಮಾಡಿಕೊಂಡಮೇಲೆ 8 ಕೋಟಿ ರೂಪಾಯಿಗಳ ಹಣವನ್ನು ಬಿಡುಗಡೆ ಮಾಡಿದ್ದೇವೆ. ಖರ್ಗೆಯವರು 4 ಕೋಟಿ ಎಂದು ಹೇಳಿದರು. 4 ಕೋಟಿ ಅಲ್ಲ. ಹೋದ 6 ತಿಂಗಳು ಕೊನೆಯಲ್ಲಿ 4 ಕೋಟಿ. ಈ ತಿಂಗಳು 4 ಕೋಟಿ

ರೀಲಿಸ್ ಮಾಡಿ ಒಟ್ಟು 8 ಕೋಟಿ ರೂಪಾಯಿ ಹಣವನ್ನು ರಿಲೀಸ್ ಮಾಡಿ ಯಾರಿಗೆ ಕಂಟ್ರಾಕ್ಟರಿಗೆ ಪೇಮೆಂಟ್ ಪಗೈರೆಗಳಿಗೆ ಸಮಸ್ಯೆಗಳಿತ್ತೊ ಆ ಸಮಸ್ಯೆಗಳ ಬಗ್ಗೆ ಸ್ವಲ್ಪ ಸುಧಾರಣೆ ಮಾಡ್ಬೇಕು ಎಂದು ಹೇಳಿ 8 ಕೋಟಿ ರೂಗಳ ಹಣವನ್ನು ಬಿಡುಗಡೆ ಮಾಡಿದಮೇಲೆ ಇವತ್ತು ವರ್ಕ್ ಸ್ವಲ್ಪ ಪ್ರೋಗ್ರೆಸ್‌ನಲ್ಲಿದೆ. ಹಣದ ಕೊರತೆ ಇವತ್ತಿಲ್ಲ. ಎಷ್ಟು ಬೇಕಾದರೂ ಈ ಕೆಲಸಕ್ಕಾಗಿ ಕೊಡುವುದಕ್ಕೆ ತಯಾರಿದ್ದೇವೆ. ಹಣದ ಕೊರತೆ ಇಲ್ಲ. ಕೊರತೆ ಇರತಕ್ಕದ್ದು ಮಾನ್ಯ ವಿರೋಧಪಕ್ಷದ ನಾಯಕರು ಹೇಳಿದಹಾಗೆ ಅಲ್ಲಿ ಟೆಂಡರ್ ಪ್ರಾರಂಭ ಮಾಡಿದಾಗಲೇ ತಕರಾರು. 60 ಪರ್ಸೆಂಟ್ ಎಸ್.ಆರ್.ರೇಟನ್ನು ಕಂಟ್ರಾಕ್ಟರ್ ಕೇಳಿ ಸ್ಟ್ರೈಕ್ ಮಾಡಿ ಮತ್ತೊಂದು ಮಾಡಿ ಎಲ್ಲಾ ಪ್ರೆಷರ್ಸ್ ಇವೆ. ಅದರಲ್ಲಿ ಏನು ಎರಡನೆಯ ಮಾತೇ ಇಲ್ಲ. ಎಲ್ಲಾ ಪ್ರೆಷರ್ ಹಾಕಿ ಕ್ವಾಲಿಟಿ ಇದ್ದಂಥ ಕಂಟ್ರಾಕ್ಟರ್‌ಗೆ ಎಷ್ಟೆಷ್ಟು ಚೈನ್ ಕೊಡಬೇಕು ಎಂಬುದು ಸರಿಯಾಗಿ ನಿಗದಿಯಾಗದೇ ಇರತಕ್ಕದ್ದೂ ಒಂದು ಕಾರಣ ಇದೆ. ಮಳೆ ಬಂದು ಹತ್ತು ದಿವಸದ ಕಾಲ ತೊಂದರೆಯಾಗಿದ್ದೂ ಒಂದು ಕಾರಣ ಇದೆ. ಶ್ರೀರಂಗದೇವರಾಯಲು ಅವರು ಒಂದು ಕಾಗದ ಬರೆದು, ಆ ಕಾಗದ ಅವರದಲ್ಲ ಎಂಬ ಮಾತನ್ನು ಅವರು ಹೇಳಿದರು. ಆ ಚುನಾವಣಾಧಿಕಾರಿಯಿಂದ ಜಿಲ್ಲಾಧಿಕಾರಿಗೆ ಹೋಗಿ ಆ ಜಿಲ್ಲಾಧಿಕಾರಿಯಿಂದ.....

ಶ್ರೀ ಶ್ರೀರಂಗದೇವರಾಯಲು:- ನಾನು ಒಪ್ಪುವುದಿಲ್ಲ.

ಶ್ರೀ ಕೆ.ಎನ್.ನಾಗೇಗೌಡ:- ನೀವು ಕಾಗದ ಬರೆದಿದ್ದೀರಿ. ಒಪ್ಪುವುದಿಲ್ಲ ಅಂದರೆ ಅದು ಹೇಗೆ? ಹೋಗಲಿ ಬಿಡಿ. ಚರ್ಚೆ ಬೇಡಿ ಈಗ. ಚರ್ಚೆ ಬೇಡ ಬಿಡಿ. ಕಾಗದ ಬರೆದಿದ್ದಾರೆ. ಅಧ್ಯಕ್ಷರೇ, ಕೊನೇ ದಿವಸ ಅವರು ನಮ್ಮ ಮುಖ್ಯಮಂತ್ರಿಗಳಿಗೆ ಹೇಳಿದ್ದಾರೆ. ನನ್ನದಲ್ಲ ಕಾಗದ ಅದು, ಯಾರೋ ಬೇರೆ ಸೈನ್ ಹಾಕಿದ್ದಾರೆ ಎನ್ನುವ ಮಾತನ್ನು ಹೇಳಿದ್ದೀರಿ. ಅದೇನು ದೊಡ್ಡ ವಿಚಾರ ಅಲ್ಲ. ಅಲ್ಲೂ ಎಲೆಕ್ಷನ್ ಕಮಿಷನ್‌ನಲ್ಲೂ 20 ದಿವಸ ನಮಗೆ ಡಿಲೇ ಆಗಿದೆ. ಆ ಎಲೆಕ್ಷನ್ ಕಮಿಷನ್‌ನಲ್ಲಿ ಡಿಲೇ ಆಗಿರುವುದು, 20 ದಿವಸ ಮಳೆ ಬಿದ್ದಿರುವುದು, ದುಡ್ಡಿಲ್ಲದೇ ಇರತಕ್ಕಂಥದ್ದು, ಸರಿಯಾದ ಕಂಟ್ರಾಕ್ಟರುಗಳನ್ನು ನಾವು ಜೋಡಿಸಿಕೊಳ್ಳದೇ ಕೆಲಸ ಮಾಡಿರತಕ್ಕಂಥದ್ದು ಈ ನಾಲ್ಕೈದು ಕಾರಣಗಳಿಂದ 75 ದಿವಸದಲ್ಲಿ ಮುಗಿಸುವುದಕ್ಕೆ ಸಾಧ್ಯ ಆಗಲಿಲ್ಲ. ಈಗ 8 ಕೋಟಿ ರೂಪಾಯಿಗಳನ್ನು ಕಳೆದ ಹದಿನೈದು ದಿವಸಗಳಲ್ಲಿ ಬಿಡುಗಡೆ ಮಾಡಿದ್ದೇವೆ. ಎರಡನೆಯದಾಗಿ ಕ್ವಾಲಿಟಿ ವರ್ಕ್ ಸರಿಯಾಗಿ ಆಗಿಲ್ಲ ಎಂದು ವಿರೋಧಪಕ್ಷದ ನಾಯಕರು ಮತ್ತು ಖರ್ಗೆಯವರು ಹೇಳಿದ್ದಾರೆ. ಏಕೆಂದರೆ ಸ್ಥಳಕ್ಕೆ ಹೋಗಿ ಬಂದಿದ್ದಾರೆ ಅವರು ಅದಕ್ಕೆ ಈಗಾಗಲೇ ಕ್ವಾಲಿಟಿ ಕಂಟ್ರೋಲ್‌ನವರನ್ನು ಕೂಡಲೇ ಆ ಸ್ಥಳಕ್ಕೆ ಹೋಗಬೇಕು ಎಂದು ಫೈಲ್ ಮೇಲೆ ನಾನು ಆದೇಶ ಮಾಡಿದ್ದೇನೆ. ಕ್ವಾಲಿಟಿ ಕಂಟ್ರೋಲ್‌ನವರನ್ನು ಕರೆಸಿ 29 ಕಿಲೋಮೀಟರ್ ಪೂರ್ತಿಯಾಗಿ ಅವರಿಂದ ಎನ್‌ಕ್ವೈರಿ ಮಾಡಿಸುವುದಕ್ಕೆ ತಯಾರಾಗಿದ್ದೇನೆ. ಇದು ಒಂದು. ಎರಡನೆಯದು ಇವತ್ತು ಇರತಕ್ಕ ಪರಿಸ್ಥಿತಿ ಏನು ಅಂತ ಹೇಳಿದರೆ 25ನೇ ತಾರೀಖಿನ ದಿವಸ ನೀರು ಕೊಡುತ್ತೇವೆ ಎಂದು

ಐ.ಸಿ.ಸಿಯವರು ಡಿಸಿಷನ್ ತೆಗೆದುಕೊಂಡಿದ್ದಾರೆ. ಈ ತಿಂಗಳ 25. ನಾವು 30ನೇ ತಾರೀಖಿನ ದಿವಸ ನೀರು ಕೊಡುವುದಕ್ಕೆ ಎಲ್ಲಾ ಕಾರ್ಯಕ್ರಮ ಹಾಕಿಕೊಂಡಿದ್ದೇವೆ. ಹೋದವರ್ಷ ಬೆಳೆ ನಷ್ಟ ಆಯಿತು ಎನ್ನುವ ಮಾತನ್ನು ಮಾನ್ಯ ಖಿರ್ಗೆಯವರು ಮತ್ತು ವಿರೋಧಪಕ್ಷದ ನಾಯಕರು ಹೇಳಿದರು. ಹೋದವರ್ಷ ನಾಲೆಯಲ್ಲಿ ಆಗಸ್ಟ್ 7ನೇ ತಾರೀಖು 1000 ಕ್ಯುಸೆಕ್ಸ್ ಅಲೋ ಮಾಡಿದ್ದಾರೆ. ಆಗಸ್ಟ್ 24ನೇ ತಾರೀಖು 1995ನೇ ಇಸವಿ ದಿವಸ ಫುಲ್ ಡಿಸ್‌ಛಾರ್ಜ್ 3400 ಕ್ಯುಸೆಕ್ಸ್ ಮಾಡಿದ್ದಾರೆ. ಹೋದ ವರ್ಷ 24ನೇ ತಾರೀಖು ಮಾಡಿದರೂ ಸಹ ನಾವು ಈ ವರ್ಷದಲ್ಲಿ.....

ಶ್ರೀ ಬಿ.ಎಸ್.ಯಡಿಯೂರಪ್ಪ:- ಒಂದೇ ಒಂದು ವಿನಂತಿ ತಮ್ಮಲ್ಲಿ. ತಾವು 25ಕ್ಕೆ 30ಕ್ಕೆ ನೀರು ಬಿಟ್ಟರೆ ತುಂಬಾ ಸಂತೋಷ. ರಿಪೇರಿ ಕೆಲಸ ಏನಾಗುತ್ತಿದೆ, ಸುಮಾರು 4000 ಕ್ಯುಸೆಕ್ಸ್ ನೀರು ಬಿಡಬೇಕಾಗುತ್ತದೆ ಆ ಸ್ಪೀಡ್‌ನಲ್ಲಿ, ಆಗ ಅದು ಕ್ಯೂರಿಂಗ್ ಆಗಿ ಅದು ಸರಿಯಾಗಿ ಆಗದಿದ್ದರೆ ಎಲ್ಲಾ ಕೊಚ್ಚಿಕೊಂಡು ಹೋಗಿ ಮತ್ತೆ ಕೋಟ್ಯಾಂತರ ರೂಪಾಯಿಗಳನ್ನು ಖರ್ಚು ಮಾಡುವ ಪರಿಸ್ಥಿತಿ ಬರುತ್ತದೆ. ಅದನ್ನು ನೋಡಿಕೊಂಡು ನೀರು ಬಿಡುವ ಕಡೆ ವಿಶೇಷವಾದ ಗಮನ ಕೊಡಿ ಅಷ್ಟೇ.

ಶ್ರೀ ಕೆ.ಎನ್.ನಾಗೇಗೌಡ:- ಹೋದವರ್ಷ ಜುಲೈ 24ನೇ ತಾರೀಖು ಅಂದರೆ ಈಗ ಎಷ್ಟು ಲೇಟಾಗುತ್ತದೆಂದರೆ ನಮಗೆ 10-12 ದಿವಸ ಲೇಟಾಗಬಹುದು ಅಥವಾ 15 ದಿವಸ ಲೇಟಾಗಬಹುದು. ಇದು 40 ವರ್ಷದ ಕಾಲುವೆ. 40 ವರ್ಷದ ಕಾಲುವೆ, ಬಹಳ ಹಳೇ ಕಾಲುವೇ ಅಂತಾನೇ ಕೆ.ಸಿ.ರೆಡ್ಡಿಯವರನ್ನು ಕಳುಹಿಸಿ ಇನ್‌ಸ್ಪೆಕ್ಷನ್ ಮಾಡಿಸಿದಮೇಲೆ ಇನ್ನರ್ ಸ್ಟೆಂತನ್ ವರ್ಕ್.....

ಶ್ರೀ ಶ್ರೀರಂಗದೇವರಾಯಲು:- ನಮಗೆ 36ನೇ ಮೈಲಿಯವರೆಗೆ ಶುಗರ್‌ಕೇನ್ ಏರಿಯಾ ಬರುತ್ತದೆ. ಅದು ನಮಗೆ 'ಎ' ಕ್ಲಾಸ್ ಲ್ಯಾಂಡ್. ಅದಕ್ಕೆ ಹೋದಸಾರಿ ತಾವು ನಮಗೆ ಯಾವಾಗ ನೀರು ಕೊಟ್ಟಿದ್ದೀರಿ? ನಮ್ಮ ರಾಯಚೂರಿನಿಂದ ಬೇರೆ, 36ನೇ ಕಿಲೊಮೀಟರ್ ಗಂಗಾವತಿ ಕ್ಷೇತ್ರವೇ ಬೇರೆ.

ಅಧ್ಯಕ್ಷರು:- ಜಯಚಂದ್ರ ಅವರೇ, ಅದರ ಬಗ್ಗೆ ಚರ್ಚೆ ಮಾಡಬಾರದು. ಬ್ರೀಫಾಗಿ ಮೆನ್‌ಷನ್ ಮಾಡಬಹುದು. ಮತ್ತು ಅದಕ್ಕೆ ಸರ್ಕಾರದಿಂದ ಉತ್ತರ ಬರುತ್ತದೆ. ನಿಮ್ಮ ಪಾರ್ಟಿಯವರಲ್ಲಿ ನೀವು ಡಿಸಿಪ್ಲೀನ್ ಮಾಡದಿದ್ದರೆ ಪಾರ್ಟಿ ಕೆಲಸವನ್ನೆಲ್ಲಾ ನಾನು ಮಾಡಲೇ?

ಶ್ರೀ ಟಿ.ಬಿ.ಜಯಚಂದ್ರ:- ಸಭಾಧ್ಯಕ್ಷರೆ, ಅವರು ಮಾತನಾಡಬೇಕು ಎಂದಾಗ ಸಚಿವರು ಈಲ್ಡ್ ಆದರು. ಅದಕ್ಕೋಸ್ಕರ ಅವರು ಪ್ರಸ್ತಾಪ ಮಾಡಿದ್ದಾರೆ.

ಶ್ರೀ ಕೆ.ಎನ್.ನಾಗೇಗೌಡ:- ಮಾನ್ಯ ಸದಸ್ಯರು ಎದ್ದಾಗ ನಾನು ಈಲ್ಡ್ ಆಗದೇ ಇದ್ದರೆ ನನಗೆ ಗೌರವ ಬರುವುದಿಲ್ಲ.

ಅಧ್ಯಕ್ಷರು:- ಈ ವಿಚಾರದಲ್ಲಿ ಅವರಿಗೆ ಅಷ್ಟು ಆಸಕ್ತಿ ಇದ್ದರೆ ಬೇರೆ ರೂಲ್ಸ್‌ನಲ್ಲಿ

ನೋಟೀಸ್ ಕೊಡಲಿ.

ಶ್ರೀ ಕೆ.ಎನ್.ನಾಗೇಗೌಡ:- ಸಾರ್, ಎರಡೇ ವಿಚಾರ ಇದೆ. ಹೋದವರ್ಷ ನಾವು ಜುಲೈ 24ಕ್ಕೆ ಕೊಟ್ಟಿದ್ದೆವು. ಈ ಸಾರಿ ಜುಲೈ 30ನೇ ತಾರೀಖು ಅಂದರೆ 1ನೇ ತಾರೀಖಿನಿಂದ 0 ಕಿಲೋಮೀಟರ್‌ನಿಂದ ನೀರನ್ನು ಅಲೋ ಮಾಡುತ್ತೇವೆ 300 ಕ್ಯುಸೆಕ್ಸ್ ಹೋಗುವಹಾಗೆ. ಸುಮಾರು ಏಳೆಂಟು ದಿವಸ ಬೇಕಾಗಬಹುದು ರಾಯಚೂರು ತಲುಪಬೇಕಾದರೆ ಕುಡಿಯುವ ನೀರಿಗೆ 30 ಟ್ಯ್ರಾಕ್ಟರುಗಳನ್ನು ಅಲಮಟ್ಟಿಯಿಂದ ತರಿಸಿ ರಾಯಚೂರಿನಲ್ಲಿ ನೀರು ಕೊಡುತ್ತಿದ್ದೇವೆ. ಆದ್ದರಿಂದ 30ಕ್ಕೆ ಅದನ್ನು ಮಾಡುತ್ತೇವೆ. ಅದರ ಬಗ್ಗೆ ಹೆಚ್ಚು ಕಾಳಜಿ ತೆಗೆದುಕೊಂಡು ಹಣಕಾಸು ಬಿಡುಗಡೆ ಮಾಡುವುದನ್ನು ಮಾಡುತ್ತೇವೆ. ಎನ್‌ಕ್ವೈರಿ ಬಗ್ಗೆ ಮಾತ್ರ, ನಮ್ಮ ಸೆಕ್ರಟರಿಯವರನ್ನು ಕಳುಹಿಸಿ ಥರೋ ಎನ್‌ಕ್ವೈರಿ ಮಾಡಿಸುವುದಕ್ಕೆ ನಾನು ಆಜ್ಞೆ ಮಾಡುತ್ತೇನೆ. ವಾಟಾಳ್ ನಾಗರಾಜ್ ಅವರು ಚಳುವಳಿ ಮಾಡಬೇಕಾದ ಅವಶ್ಯಕತೆ ಇಲ್ಲ.

ಶ್ರೀ ವಾಟಾಳ್ ನಾಗರಾಜ್:- ಇವರು ಚಳುವಳಿ ಮಾಡಬೇಕಾದ ಅವಶ್ಯಕತೆ ಇಲ್ಲ ಎಂದು ಹೇಳುತ್ತಿದ್ದಾರೆ. 30ನೇ ತಾರೀಖಿನೊಳಗೆ ಇವರು ಬಿಡಲಿಲ್ಲ ಅಂತ ಅಂದರೆ ಆಗಸ್ಟ್ 1ನೇ ತಾರೀಖು ಚಳುವಳಿ ಆರಂಭ ಮಾಡುತ್ತೇವೆ.

ಶ್ರೀ ಕೆ.ಎನ್.ನಾಗೇಗೌಡ:- ಸಾರ್, ಅವರು ಒಂದು ತಿಳಿದುಕೊಳ್ಳಬೇಕು. ಇದು ಇನ್ನರ್ ಸ್ಟೇಂಥನ್ ವರ್ಕ್. 30ನೇ ತಾರೀಖು ಮಾಡುತ್ತೇವೆ ಎಂದು ಐ.ಸಿ.ಸಿ.ಯವರು ನಿರ್ಣಯ ತೆಗೆದುಕೊಂಡಿದ್ದಾರೆ. ಟೈಮ್ ಬೌಂಡ್ ಪ್ರೋಗ್ರಾಂ, ಕೊಟ್ಟಿದ್ದೇವೆ ಮಾನ್ಯ ಯಡಿಯೂರಪ್ಪನವರು ಹೇಳಿದಹಾಗೆ. ಎಲ್ಲಾ ಪ್ರಯತ್ನಗಳನ್ನೂ ಮಾಡಿ 30ನೇ ತಾರೀಖು ನೀರು ಹೋಗುವಹಾಗೆ ನಾವು ಪ್ರಯತ್ನ ಮಾಡುತ್ತೇವೆ. ಚಳುವಳಿ ಮಾಡುವುದಕ್ಕೆ ನಾವು ಅವಕಾಶ ಕೊಡುವುದಿಲ್ಲ.

ಶ್ರೀ ಎಂ.ಮಲ್ಲಿಕಾರ್ಜುನ ಖರ್ಗೆ:- ಮೊದಲಿನಿಂದ ನಿಮ್ಮ ಆರ್ಡರ್ ಪ್ರಕಾರ ಜುಲೈ ಮೊದಲ ವಾರದಲ್ಲಿ ಮಾಡಬೇಕು ಎಂದು ಇತ್ತು. ಹೌದೇ? ತಾವು ಘೋಷಣೆಯನ್ನು ಕೂಡ ಆದೇ ಮಾಡಿದ್ದೀರಿ. ಒಂದನೇ ತಾರೀಖಿನಿಂದ ನೀರು ಬಿಡುತ್ತೇವೆ ಎಂದು ತಾವು ಹೇಳಿದ್ದಿರಿ. ಈ ಮಧ್ಯೆ ನೀವೇನು ಟೈಮ್ ತೆಗೆದುಕೊಂಡಿರಲ್ಲ ಒಂದೂವರೆ ತಿಂಗಳು ಹೆಚ್ಚು ಕಡಿಮೆ ಅದು ಏತಕ್ಕೆ?

ಶ್ರೀ ಕೆ.ಎನ್.ನಾಗೇಗೌಡ:- ನಾನು ನಾಲ್ಕು ಕಾರಣ ಹೇಳಿದೆ. ಒಂದು, ಹಣ ಕೊಡಲಿಲ್ಲ. ಎರಡನೆಯದು, ಮಳೆ ಬಂತು. ಮೂರನೆಯದು ಎಲೆಕ್ಷನ್ ಕಮಿಷನ್. ನಾಲ್ಕನೆಯದು, ಕಂಟ್ರಾಕ್ಟರ್ಸ್ ಸ್ಟ್ರೈಕ್ ಈ ನಾಲ್ಕು ಕಾರಣಗಳಿಂದ ಡಿಲೇ ಆಯಿತು ಅಂತ ಹೇಳಿದ್ದೇನೆ.

ಶ್ರೀ ಟಿ.ಬಿ.ಜಯಚಂದ್ರ:- ತಾವು ಬುಗುಡ್‌ನಳ್ಳಿ ಕೆರೆಗೆ ನೀರು ಬಿಟ್ಟದ್ದುದು ಬರಲಿಲ್ಲ. ಅದಕ್ಕೋಸ್ಕರ ಅದೇ ರೀತಿ ಆಗಬಾರದು ಎಂದು ಹೇಳಿದವು.

ಶ್ರೀ ಜಿ.ವಿ.ಶ್ರೀರಾಮರೆಡ್ಡಿ:- ಮಾನ್ಯ ಸಭಾಧ್ಯಕ್ಷರೆ, ನಾರಾಯಣಪುರ ಎಡದಂಡೆ ಕಾಲುವೆ 0 ಯಿಂದ 78 ಕಿಲೋಮಿಾಟರ್ ಉದ್ದ ಇದೆ. ಇದರಲ್ಲಿ ಹತ್ತು ಸಾವಿರ ಕ್ಯುಸೆಕ್ಸ್ ನೀರು ಹೋಗತಕ್ಕ ಕೆಪಾಸಿಟಿ ಇರತಕ್ಕಂಥದ್ದು. ಆದರೂ ಈಗ ಬಿಟ್ಟಿರತಕ್ಕಂಥದ್ದು 3000 ಕುಸೆಕ್ಸ್ ನೀರು ಮಾತ್ರ. 10 ಸಾವಿರ ಕ್ಯುಸೆಕ್ಸ್ ಕೆಪಾಸಿಟಿ ಇರತಕ್ಕ ಆ ಕಾಲುವೆಗೆ ಅಮ 3000 ಕುಸೆಕ್ಸ್ ನೀರು ಹರಿಯುವುವಾಗಲೇ ಬಿರುಕು ಬಿಟ್ಟಿದೆ. ಯಾವಯಾವ ರೀತಿ ಬಿರುಕು ಬಿಟ್ಟಿದೆ ಅಂದರೆ 3000 ಕ್ಯುಸೆಕ್ಸ್ ನೀರು ಹರಿಯಬಿಟ್ಟಾಗ ಮೊದಲನೇ ಸಲ 1990ರಲ್ಲಿ 24ನೇ ಕಿಲೋಮಿಾಟರ್‌ನಲ್ಲಿ ಒಡೆದಿದೆ. 1992ನೇ ಇಸವಿಯಲ್ಲಿ 59ನೇ ಕಿಲೋಮಿಾಟರ್‌ನಲ್ಲಿ ಒಡೆದಿದೆ. 3ನೇ ಸಲ 1994ರಲ್ಲಿ 65ನೇ ಕಿಲೋಮಿಾಟರ್‌ನಲ್ಲಿ ಒಡೆದಿದೆ. 1996ರಲ್ಲಿ 4ನೇ ಸಲ 48ನೇ ಕಿಲೋಮೀಟರ್ ಮತ್ತು 71ರಲ್ಲಿ ಕಾಲುವೆ ಒಡೆದಿದೆ. ಈ ಕಾಲುವೆ ಒಡೆದಿರುವುದರಿಂದ ಬಿಜಾಪುರ ತಾಲ್ಲೂಕು ಮತ್ತು ಗುಲ್ಬರ್ಗ ಜಿಲ್ಲೆಯ ನಾಲ್ಕು ತಾಲ್ಲೂಕುಗಳಲ್ಲಿ 10 ಲಕ್ಷ ಎಕರೆ ಜಮಿನಲ್ಲಿ ರೈತರು ನಷ್ಟ ಅನುಭವಿಸುತ್ತಿದ್ದಾರೆ. ಇದರಲ್ಲಿ ರಿಪೇರಿ ಮಾಡತಕ್ಕದ್ದರ ಬದಲು ಶಿಲ್ಟ್ ಮಾಡುತ್ತಿದ್ದಾರೆ. ಕಾಲುವೆ ರಿಪೇರಿ ಮಾಡುವುದಕ್ಕೆ ಹಣ ಖರ್ಚು ಮಾಡುವ ಬದಲು ಶಿಲ್ಟ್ ಮಾಡುವುದಕ್ಕೆ ಕೋಟ್ಯಾಂತರ ರೂಪಾಯಿಗಳನ್ನು ಕೊಟ್ಟಿದ್ದಾರೆ. ಅದರಿಂದ ಏನೂ ಪ್ರಯೋಜನ ಆಗದೆ ಅಲ್ಲಿ ಅವ್ಯವಹಾರ ನಡೆದಿದೆ. ಸುಮಾರು 18ಕೋಟಿ ರೂಪಾಯಿ ಅವ್ಯವಹಾರ ಆಗಿದೆ. ಅದರ ಜೊತೆಗೆ ನಾರಾಯಣಪುರ ಡ್ಯಾಮ್‌ನ ಕ್ರಸ್ಟ್ ಗೇಟ್ 1992ರಲ್ಲೇ ಒಡೆದಿದೆ. 1994ರಲ್ಲಿ ರೇಡಿಯಲ್ ಗೇಟ್ ಒಡೆದು ಬೇಸಿಗೆ ಕಾಲದ ಬೆಳೆಗೆ ನೀರು ಸಿಗದೆ ಬೆಳೆ ನಾಶವಾಗಿದೆ. ಇಷ್ಟೆಲ್ಲಾ ಆದರೂ ಕೂಡ ಇವತ್ತಿಗೂ, 90ನೇ ಇಸವಿಯಿಂದ ಕಾಲುವೆ ಒಡೆಯುತ್ತಿದ್ದರೂ ಕೂಡ ಕಾಲುವೆ ರಿಪೇರಿ ಮಾಡುವುದಕ್ಕೆ ಹಣ ಖರ್ಚುಮಾಡದೇ ಬರೀ ಹೂಳೆತ್ತುವುದಕ್ಕೆ ಖರ್ಚು ಮಾಡಿ ಅವ್ಯವಹಾರ ನಡೆಯುತ್ತಾ ಇದೆ. ಇಂಥದ್ದರಲ್ಲಿ ಅವ್ಯವಹಾರ ಮಾಡುವುದು ಬಹಳ ಸುಲಭ. ರಿಪೇರಿ ಮಾಡುವುದಕ್ಕೆ ಹಣ ಕೊಟ್ಟಿಲ್ಲ. ಇದರಿಂದ ರೈತರಿಗೆ ಭಾರಿ ನಷ್ಟ ಆಗುತ್ತಾ ಇದೆ. ಸಂಬಂಧಪಟ್ಟ ಇಂಜಿನಿಯರ್ಸ್ ಯಾರಿದ್ದಾರೆ ಅವರ ಮೇಲೆ ಕ್ರಮ ತೆಗೆದುಕೊಳ್ಳಬೇಕು. ಕಾಲುವೆಯನ್ನು ತಕ್ಷಣ ದುರಸ್ತಿ ಮಾಡಬೇಕು ಎಂದು ಹೇಳಿ ನಾನು ಸರ್ಕಾರದ ಗಮನವನ್ನು ಸೆಳೆಯುತ್ತೇನೆ.

ಶ್ರೀ ಕೆ.ಎನ್.ನಾಗೇಗೌಡ:- ಮಾನ್ಯ ಶ್ರೀರಾಮರೆಡ್ಡಿಯವರು ಎತ್ತಿರತಕ್ಕ ನಾರಾಯಣಪುರ ಎಡದಂಡೆ ನಾಲೆ ವಿಚಾರದಲ್ಲಿ 96ರಲ್ಲಿ ಒಡೆದಿಲ್ಲ. ಹಿಂದೆ ಅವರು ಹೇಳಿದಂಥ ಇಸವಿಗಳಲ್ಲಿ ಒಡೆದಿದೆ. 0 ಕಿಲೋಮಿಾಟರ್‌ನಿಂದ 78 ಕಿಲೋ ಮಿಾಟರ್‌ವರೆಗೆ ಕಾಲುವೆ ಭದ್ರತೆ ಬಗ್ಗೆ ಅದನ್ನು ನಾವು ಮೈಂಟೀನ್ ಮಾಡುವುದಕ್ಕೆ ಒಂದು ತಜ್ಞರ ಸಮಿತಿಯನ್ನು ಇವತ್ತೆ ನೇಮಿಸುತ್ತೇನೆ. ಎರಡನೆಯದು, ಅವರು ಏನು ಅವ್ಯವಹಾರ ಆಗಿದೆ ಎಂದು ಹೇಳಿದ್ದಾರೆ ಅದರ ಬಗ್ಗೆ ಸಂಪೂರ್ಣವಾದಂಥ ತನಿಖೆ ಮಾಡಿಸುವುದಕ್ಕೆ ಎಲ್ಲಾ ಕ್ರಮ ತೆಗೆದುಕೊಳ್ಳುತ್ತೇನೆ.

ಅಧ್ಯಕ್ಷರು:- ಈಗ ಸಭೆಯನ್ನು ಮುಂದೂಡಲಾಗಿದೆ. ಮತ್ತೆ 4 ಗಂಟೆಗೆ ಸಭೆಯು ಸಮಾವೇಶಗೊಳ್ಳುತ್ತದೆ.

(ಸಭೆಯು 3 ಗಂಟೆಗೆ ಮುಂದೂಡಲ್ಪಟ್ಟು ಮತ್ತೆ 4 ಗಂಟೆಗೆ ಸಮಾವೇಶಗೊಳ್ಳಲು ನಿರ್ಧರಿಸಿತು.)

(ಊ) ಬೆಳಗಾಂ ಜಿಲ್ಲೆಯಲ್ಲಿ ಕಬ್ಬನ್ನು ಅರೆಯದೇ ಇರುವುದರ ಬಗ್ಗೆ.

SRI B.I.PATIL:- Mr.Speaker, Sir, regarding excess sugarcane and the loss suffered by the farmers, yesterday the hon'ble Minister for Agriculture stated that Government has sanctioned 16 new sugar mills and announced subsidy on fertiliser as the farmers are put to lot of hardship. What the hon'ble Minister stated is for the future, but what about the existing stock of sugarcane lying with the farmers in their fields? Due to non-crushing, the farmers have suffered heavy losses. For the loss suffered by them this year, the Government should give compenstion as farmers are in great difficulty. I want an assurance from the Government in theis regard as excess sugarcane is lying with the farmers. I have no other alternative except to sit in Dharana on behalf of the affected farmers.

ಶ್ರೀ ಕೆ.ಎಸ್.ಪುಟ್ಟಣ್ಣಯ್ಯ :- ಮಾನ್ಯ ಸಭಾಧ್ಯಕ್ಷರೆ, ನಿನ್ನೆ ಒಂದೂವರೆ ಗಂಟೆಗಳ ಕಾಲ ಸುದೀರ್ಘವಾಗಿ ಇದರ ಬಗ್ಗೆ ಚರ್ಚೆಯಾಯಿತು. ಆ ಕಾರ್ಯಕ್ರಮದ ಮೇಲೆ ನಾವು ನಿನ್ನೆ ಧರಣಿ ಮಾಡಿದ್ದೆವು. ಸರಕಾರದಿಂದ ಸ್ಪಷ್ಟವಾದ ಸಮಂಜಸವಾದ ಉತ್ತರ ಬರಲಿಲ್ಲ. ಜೊತೆಗೆ ಈ ರಾಜ್ಯದಲ್ಲಿ ಬದುಕತಕ್ಕಂತಹ 6ನೇ 1ಭಾಗ ಜನ ಈ ಕೇತ್ರದಲ್ಲಿ ನಿಂತಿದ್ದಾರೆ. ನಿಜ ಹೇಳಬೇಕೆಂದರೆ ಬಹಳ ಜನ ಆತ್ಮಹತ್ಯೆ ಮಾಡಿಕೊಳ್ಳತಕ್ಕಂತಹ ಪರಿಸ್ಥಿತಿಗೆ ಬಂದಿದ್ದಾರೆ. ಬೇಕಾದರೆ ಶನಿವಾರ ಭಾನುವಾರ ಬನ್ನಿ ಕಬ್ಬಿನ ಸ್ಥಿತಿ ಏನು ಎಂದು ತಿಳಿಯುತ್ತದೆ. 8-10 ಗಾಡಿ ಕಬ್ಬನ್ನು ವಿಧಾನಸೌಧದ ಮುಂದೆ ತರಲಿಕ್ಕೆ ತಾವು ಅಪ್ಪಣೆ ಕೊಟ್ಟರೆ ಆ ಸತ್ತು ಹೋಗಿರತಕ್ಕಂತಹ ಕಬ್ಬನ್ನು ತೆಗೆದುಕೊಂಡು ಬರುತ್ತೇವೆ. ನಿಜವಾಗಲೂ ಇದರ ಬಗ್ಗೆ ಯಾವುದೇ ಗಂಭೀರವಾದ ವಿಚಾರ ಏನೂ ಇಲ್ಲ ಈಗಾಗಲೇ ನಾನು ನಿನ್ನೆ ಕೇಳಿದೆ, ನಮ್ಮ ಮಂಡ್ಯ ಕ್ಷೇತ್ರದಲ್ಲಿ ಸೇಟು ಅಂಗಡಿಗೆ ಹೋಗಿ ಕೇಳಿದರೆ ತಾಳಿ ಕೊಡು ಎಂದರೆ ಫಸ್ಟ್ ಹ್ಯಾಂಡ್ ತಾಳಿ ಬೇಕೋ , ಸೆಕೆಂಡ್ ಹ್ಯಾಂಡ್ ತಾಳಿ ಬೇಕೋ ಎಂದು ಕೇಳುತ್ತಾನೆ. ಫಸ್ಟ್ ಹ್ಯಾಂಡ್ ತಾಳಿ ಎಂದರೆ ಹೊಸದು, ಸೆಕೆಂಡ್ ಹ್ಯಾಂಡ್ ತಾಳಿ ಎಂದರೆ ರೈತರು ತೆಗೆದುಕೊಂಡು ಹೋಗಿ ಅವರ ಹತ್ತಿರ ಅಡವು ಇಟ್ಟಿರುವುದು. ಈ ಪರಿಸ್ಥಿತಿ ಅಲ್ಲಿ ಸೃಷ್ಟಿಯಾಗಿದೆ. ಯಾವುದೇ ಉತ್ತರದ ಬಗ್ಗೆ